ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 ಸಂಚಿಕೆ 33 ಆಗಸ್ಟ್ 12, 1984 ಬೆಲೆ 60 ಪೈಸೆ.

ಸರ್ವಾಧಿಕಾರದ ವಿರುದ್ಧ ಐಕ್ಯ ಹೋರಾಟ

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಸತತ ಪ್ರಯತ್ನದಿಂದ ಕಳೆದ ಒಂದೂವರೆ ವರ್ಷದಿಂದ ನಮ್ಮ ದೇಶದಲ್ಲಿರುವ ಎಲ್ಲಾ ವಿರೋಧ ಪಕ್ಷಗಳನ್ನು (ಬಿ. ಜೆ. ಪಿ. ಲೋಕದಳಗಳನ್ನೂ ಕೆಲವು ಸಂದರ್ಭದಲ್ಲಿ) ಕನಿಷ್ಠ ಕಾರ್ಯಕ್ರಮಗಳ ತಳಹದಿಯಲ್ಲಿ, ಕೆಲವು ಸಲ ನಿರ್ದಿಷ್ಟ ಸಮಸ್ಯೆಯ ಸಲುವಾಗಿ ಒಂದೆಡೆ ಸೇರಿಸಿ ಜನತೆಯ ಹಕ್ಕು ಬಾಧ್ಯತೆ, ದೇಶದ ಐಕ್ಯತೆ, ಚುನಾಯಿತ ಸರ್ಕಾರಗಳ ರಕ್ಷಣೆ, ಜನರನ್ನು ಬಾಧಿಸುತ್ತಿರುವ ಸಮಸ್ಯೆಗಳ ಕುರಿತು ಜನ ಜಾಗೃತಿಯನ್ನುಂಟು ಮಾಡಲು, ಐಕ್ಯ ಹೋರಾಟ ನಡೆಸಲು ಸಾಧ್ಯವಾಗಿದೆ.

ಇಂದಿರಾ ಗಾಂಧಿಯ ಏಕವ್ಯಕ್ತಿ ಸರ್ವಾಧಿಕಾರವನ್ನು ಸೋಲಿಸಬೇಕಾದರೆ, ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಜೊತೆಯಲ್ಲಿಯೇ ಕೆಲವು ಸಂದರ್ಭಗಳಲ್ಲಿ ಬಿ. ಜೆ. ಪಿ. ಲೋಕದಳಗಳಂಥ ಪಕ್ಷಗಳನ್ನು ಸೇರಿಸಿಕೊಂಡು ಸಂಯುಕ್ತ ಪ್ರತಿಭಟನೆ ವಿರೋಧ ವ್ಯಕ್ತಮಾಡುವುದು ಅಗತ್ಯವಾದುದರಿಂದಲೇ ಮೊನ್ನೆ ಪ್ರಾರಂಭವಾದ ಲೋಕಸಭೆ ಸಮಾವೇಶ ಪ್ರಾರಂಭವಾದ ಕೂಡಲೇ ಜಮ್ಮು-ಕಾಶ್ಮೀರದಲ್ಲಿಯ ಡಾ|| ಫರೂಕ್ ಅಬ್ದುಲ್ಲಾ ಸರ್ಕಾರದ ಪ್ರಜಾಪ್ರಭುತ್ವ ಸಂವಿಧಾನ ವಿರೋಧವಾದ ವಿಸರ್ಜನೆ ಮತ್ತು ಪಂಜಾಬ್ ಘಟನೆ, ಪಂಜಾಬಿನ ಕುರಿತು ಕೇಂದ್ರ ಸರ್ಕಾರ ಹೊರಡಿಸಿದ ಶ್ವೇತ ಪತ್ರಗಳ ಕುರಿತು ಸಂಯುಕ್ತ ಪ್ರತಿಭಟನೆ ವ್ಯಕ್ತಮಾಡಲು ಸಾಧ್ಯವಾಗಿದೆ. ಜಮ್ಮು-ಕಾಶ್ಮೀರ ಸರ್ಕಾರದ ವಿಸರ್ಜನೆಯ ಕುರಿತು ಚರ್ಚಿಸಲು ಲೋಕಸಭಾಧ್ಯಕ್ಷರು ಅವಕಾಶ ಮಾಡಿ ಕೊಡದಿದ್ದಾಗ ಸರ್ಕಾರ ಸಂಯುಕ್ತ ಪ್ರತಿಭಟನೆಯನ್ನೆದುರಿಸ ಬೇಕಾಯಿತು. ಡಾ|| ಅಬ್ದುಲ್ಲಾ ಸರ್ಕಾರವನ್ನು ವಿಸರ್ಜಿಸಿರುವುದು, ಕಾಂಗ್ರೆಸ್ ವಿರೋಧಿ ಸರ್ಕಾರಗಳನ್ನು ನಿರ್ಬಲಗೊಳಿಸುವ ಸ್ಪಷ್ಟ ಕ್ರಮವಾಗಿರುವುದರಿಂದ ಪಾರ್ಲಿಮೆಂಟರಿ ಪದ್ಧತಿಗೆ ಕೊಡಲಿಯೇಟು ಹಾಕಿದಂತಾಗಿದೆಂಬ ಸ್ಪಷ್ಟ ಅಭಿಪ್ರಾಯವನ್ನು ಎಲ್ಲ ವಿರೋಧ ಪಕ್ಷಗಳೂ ವ್ಯಕ್ತಮಾಡಿರುವುದು ನಮ್ಮ ದೇಶದ ರಾಜಕೀಯದಲ್ಲಿ ಹೊಸ ಅಧ್ಯಾಯ ಬರೆದಂತಾಗಿದೆ.

ಇಂಥ ತುರ್ತಿನ ಸಮಸ್ಯೆಯನ್ನು ಚರ್ಚೆಮಾಡಲು ಅವಕಾಶ ಮಾಡಿ ಕೊಡದಿರುವುದು ಹಿಂದೆ ಅನುಸರಿಸಿಕೊಂಡು ಬಂದಂಥಾ ಲೋಕಸಭೆಯ ನೀತಿ ನಿಯಮಗಳಿಗೂ ಫೆಡರಲಿಸಂ ಪದ್ಧತಿಗೂ ವಿರೋಧವಾಗಿದೆ. ಭಕ್ರಾನಂಗಲ್ ಕಾಲುವೆಯನ್ನು ಒಡೆದು ಸಾವಿರಾರು ಎಕ್ರೆ ಭೂಮಿ ಹಾಗೂ ಜನರ ಜೀವನಕ್ಕೆ ಅಪಾಯವನ್ನುಂಟು ಮಾಡಿದ ವಿಷಯವನ್ನು ಚರ್ಚಿಸಲು ಅವಕಾಶ ಮಾಡಿಕೊಡದಿರುವುದೂ ಜನತಂತ್ರ ಪದ್ಧತಿಯನ್ನು ಕೊಲೆ ಮಾಡಿದಂತಾಗಿದೆ. ಆ ಕಾರಣದಿಂದಲೇ ಎಲ್ಲ ವಿರೋಧ ಪಕ್ಷಗಳೂ ಲೋಕಸಭೆಯ ಸಮಾವೇಶಕ್ಕೆ ಬಹಿಷ್ಕಾರ ಹಾಕಬೇಕಾಗಿ ಬಂತು. ದೇಶದ ಹಿತದ ದೃಷ್ಟಿಯಿಂದ ಇಂಥ ಸಂಯುಕ್ತ ಪ್ರತಿಭಟನೆಗಳು ಮುಂದುವರಿಯುವುದು ಅತ್ಯಗತ್ಯ.

1984, ಆಗಸ್ಟ್ 15 - 38 ನೇ ಸ್ವಾತಂತ್ರ್ಯೋತ್ಸವ

ಕಾಂಗ್ರೆಸ್ ಆಡಳಿತೆಯಲ್ಲಿ ಕನಸಾಗಿ ಉಳಿದ ಜನತೆಯ ನಿರೀಕ್ಷೆಗಳು

ಎಚ್. ಎಲ್. ಉಪಾಧ್ಯಾಯ

ಆಗಸ್ಟ್ 15 ಭಾರತದ ಜನತೆಗೆ ಅತಿ ಪವಿತ್ರವಾದ ಚಾರಿತ್ರಿಕ ದಿನ. ಬ್ರಿಟಿಷರ ಗುಲಾಮಗಿರಿಯನ್ನು ಅಂತ್ಯಗೊಳಿಸಿ ಭಾರತಕ್ಕೆ ಸ್ವಾತಂತ್ರ್ಯ ದೊರೆತ ದಿನ. ಇದು ಚಿರಸ್ಮರಣೀಯವಾದುದಲ್ಲದೆ ಜನತೆಯ ಕನಸು ನನಸಾದ ದಿನ.

ವಿದೇಶೀ ಗುಲಾಮಗಿರಿಯನ್ನು ಹೋಗಲಾಡಿಸಲು ಭಾರತದ ಜನತೆ ಹಲವು ದಶಕಗಳ ಹೋರಾಟ ನಡೆಸಬೇಕಾಯಿತು. 1857 ರ ಸಿಪಾಯಿ ದಂಗೆಯಿಂದ ಆರಂಭವಾದ ಸ್ವಾತಂತ್ರ್ಯ ಸಂಗ್ರಾಮ, ನಂತರ ನಡೆದ ವಿವಿಧ ಹೋರಾಟಗಳನ್ನು ನಾವು ಸ್ಮರಿಸಬಹುದು. ಈ ಹೋರಾಟಗಳಲ್ಲಿ ಕಾರ್ಮಿಕರು, ರೈತರು, ಮಧ್ಯಮ ವರ್ಗದವರು ಮತ್ತು ಬಂಡವಾಳಶಾಹಿಗಳು ಸಹ ಭಾಗವಹಿಸಿದ್ದರು. ಕಾಂಗ್ರೆಸ್ ಈ ಹೋರಾಟ ನಡೆಸಿದ್ದರೂ. ಕಾರ್ಮಿಕರೂ ಅವರ ಸಂಘಗಳ ಮೂಲಕ ಭಾಗವಹಿಸಿತ್ತು. ಕಮ್ಯೂನಿಸ್ಟ್ ಪಾರ್ಟಿಯ ಪಾತ್ರ ಮಹತ್ವದ್ದಾಗಿತ್ತು. ಬಂಡವಾಳಶಾಹಿ-ಭೂಮಾಲಕರ ನೇತೃತ್ವದಲ್ಲಿದ್ದ ಕಾಂಗ್ರೆಸ್ ಈ ಹೋರಾಟಗಳನ್ನು ಅಹಿಂಸೆ, ಸತ್ಯಾಗ್ರಹ ಮತ್ತು ಅಸಹಕಾರಗಳಿಗೆ ಸೀಮಿತಗೊಳಿಸಲು ಪ್ರಯತ್ನಿಸಿದರೂ ಯುವಕರು ಸಶಸ್ತ್ರ ಧಾಳಿ, ಬಾಂಬೆಸೆತ ಮುಂತಾದ ವಿಧಾನಗಳನ್ನೂ ಅನುಸರಿಸಿದರು. ಕಾರ್ಮಿಕರು ಸಾಮೂಹಿಕ ಮುಷ್ಕರಗಳನ್ನು ನಡೆಸಿದ್ದಲ್ಲದೆ, ಉಗ್ರ ರೀತಿಯ ಹೋರಾಟಗಳನ್ನು ನಡೆಸಿದ್ದರು. ಈ ಎಲ್ಲ ಹೋರಾಟಗಳಿಗೆ ಪೂರಕವಾಗಿ ಎರಡನೇ ಮಹಾ ಯುದ್ಧ ಅಂತ್ಯವಾದ ನಂತರ ನಡೆದ ನಾವಿಕರ ಬಂಡಾಯ ಮತ್ತು ಇತರ ಸೈನಿಕ ಕೇಂದ್ರಗಳಲ್ಲೂ ನಡೆದ ಮುಷ್ಕರಗಳು ಬ್ರಿಟಿಶರನ್ನು ದೇಶದಿಂದ ತೊಲಗುವಂತೆ ಮಾಡಿದವು.

ಆದರೆ 1947 ರಲ್ಲಿ ಬಂದ ಸ್ವಾತಂತ್ರ್ಯ ಕಾಂಗ್ರೆಸ್‌ನವರು ಬ್ರಿಟಿಷ್ ಸಾಮ್ರಾಜ್ಯಶಾಹಿ ಜೊತೆಗೆ ಮಾಡಿದ ಒಪ್ಪಂದದ ಮೂಲಕ ಬ್ರಿಟಿಷರ ನೇರ ಆಡಳಿತೆಯನ್ನು ಕೊನೆಗೊಳಿಸಿದರೂ, ಅವರ ಆರ್ಥಿಕ ಶೋಷಣೆಯನ್ನು ಕೊನೆಗೊಳಿಸಲಿಲ್ಲ. ಅಧಿಕಾರ ಬ್ರಿಟಿಷರಿಂದ ಇಲ್ಲಿಯ ಬಂಡವಾಳಶಾಹಿ-ಜಮೀನ್ದಾರ ಪ್ರತಿನಿಧಿಯಾದ ಕಾಂಗ್ರೆಸ್ ಕೈಗೆ ವರ್ಗಾಯಿಸಲ್ಪಟ್ಟಿತು.

1947 ರಿಂದ ಈ ವರೆಗೂ ಕೇಂದ್ರದಲ್ಲಿ ಕಾಂಗ್ರೆಸ್ (1977 ರಿಂದ 1979 ರ ಅವಧಿಯನ್ನು ಬಿಟ್ಟರೆ) ನಿರಂತರ ಆಡಳಿತೆ ನಡೆಸಿಕೊಂಡು ಬಂದಿದೆ. ಈ 35 ವರ್ಷಗಳಲ್ಲಿ ಇವರು ಸಾಧಿಸಿದ್ದಾದರೂ ಏನು ? ನಮ್ಮ ಜನತೆ ನಿರೀಕ್ಷಿಸಿದ್ದ ಆಸೆ-ಆಕಾಂಕ್ಷೆಗಳೆಲ್ಲಾ ಕನಸಾಗಿಯೇ ಉಳಿದಿವೆ. ಈ ಅವಧಿಯಲ್ಲಿ ಲಕ್ಷಾಧೀಶ್ವರರು ಕೋಟ್ಯಾಧೀಶರಾಗಿದ್ದಾರೆ. ಆದರೆ ಬಡತನ, ನಿರುದ್ಯೋಗ ತಾಂಡವವಾಡುತ್ತಿದೆ. ಬೆಲೆಗಳು ದಿನೇ ದಿನೇ ಏರುತ್ತಿವೆ. ಬಡವರು ಇನ್ನೂ ಹೆಚ್ಚು ಬಡವರಾಗುತ್ತಿದ್ದಾರೆ. ಆದರೆ ಶ್ರೀಮಂತರು ಹೆಚ್ಚು ಶ್ರೀಮಂತರಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಆರು ಪಂಚವಾರ್ಷಿಕ ಯೋಜನೆಗಳು ಮುಗಿದು ಈಗ ಏಳನೇ ಯೋಜನೆ ಸಿದ್ಧವಾಗುತ್ತಿದೆ. ಕಾಲಾವಧಿಯಲ್ಲಿ ಹಲವು ಘನ ಕೈಗಾರಿಕೆಗಳೂ, ಇತರ ಕೈಗಾರಿಕೆಗಳೂ ಸ್ಥಾಪನೆಯಾದರೂ ನಾವಿನ್ನೂ ಸ್ವಾವಲಂಬನೆಯನ್ನು ಸಾಧಿಸಲಾಗಲಿಲ್ಲ. ವಿದೇಶೀ ಬಂಡವಾಳಗಾರರ ಶೋಷಣೆ ಮುಂದುವರಿದಿದೆ. ಬಹು ರಾಷ್ಟ್ರೀಯ ಸಂಸ್ಥೆಗಳ ಮೂಲಕವೂ, ಐ.ಎಂ.ಫ್, ವಿಶ್ವ ಬ್ಯಾಂಕ್ ಮತ್ತಿತರ ಸಂಸ್ಥೆಗಳ ಮೂಲಕವೂ ನಿರಂತರ ಶೋಷಣೆ ನಡೆಯುತ್ತಲೇ ಇದೆ. ಉತ್ಪಾದನೆ ಹೆಚ್ಚುತ್ತಿದ್ದರೂ ಅದರ ಲಾಭ ಜನತೆಗೆ ದೊರೆಯದಾಗಿದೆ. ಇದಕ್ಕೆ ಬಂಡವಾಳಶಾಹಿ ಪಥದಲ್ಲಿ ದೇಶ ಅಭಿವೃದ್ಧಿಗೊಳಿಸಲು ಕಾಂಗ್ರೆಸ್ ಅನುಸರಿಸುವ ಧೋರಣೆಯಾಗಿದೆ. ತೆರಿಗೆಗಳ ಹೊರೆಯಿಂದ ಎಲ್ಲ ವಿಭಾಗಗಳ ಜನತೆಯೂ ಬಳಲುತ್ತಿರುವುದನ್ನು ನೋಡುತ್ತೇವೆ.

ಈ ಅವಧಿಯಲ್ಲಿ ಹಲವಾರು ಭೂ ಸುಧಾರಣೆಗಳು ಬಂದಿದ್ದರೂ ರೈತರ ಗೋಳು ಕಡಿಮೆಯಾಗಲಿಲ್ಲ. ಲಕ್ಷಾಂತರ ರೈತರು ತಾವು ಗೇಣಿದಾರರಾಗಿ ದುಡಿಯುತ್ತಿದ್ದ ಜಮೀನುಗಳನ್ನು ಕಳಕೊಂಡು ಕೃಷಿ ಕಾರ್ಮಿಕರಾಗಿ ದುಡಿಯುವ ಸ್ಥಿತಿಗೆ ಬಂದಿದ್ದಾರೆ. ಕೃಷಿ ಕಾರ್ಮಿಕರ ಸಂಖ್ಯೆ ಬೆಳೆದಿದೆ. ಆದರೆ ಅವರ ಕೂಲಿ ತೀರಾ ಕಡಿಮೆ. ಅವರಿಗೆ ಕನಿಷ್ಠ ಕೂಲಿ ನಿಗದಿ ಮಾಡಲು ಸರಕಾರ ನಿರಾಕರಿಸುತ್ತಿದೆ. ಇತರ ಸೌಲಭ್ಯಗಳೂ ಇಲ್ಲದಂತಾಗಿದೆ.

ಸರಕಾರದ ಅಧಿಕೃತ ಅಂಕೆ ಸಂಖ್ಯೆಗಳನ್ನು ತೆಗೆದುಕೊಂಡರೂ ಸುಮಾರು ಶೇಕಡಾ 48 ರಷ್ಟು ಜನ ನಮ್ಮ ದೇಶದಲ್ಲಿ ಬಡತನದ ರೇಖೆಗಿಂತ ಕೆಳಗಿದ್ದಾರೆ. ಅವರ ದಾರುಣ ಪರಿಸ್ಥಿತಿಯನ್ನು ವಿವರಿಸಲು ಸಾಧ್ಯವಿಲ್ಲ. ಅವರ ಆದಾಯ ಕಡಿಮೆ. ವಸತಿ ಸೌಕರ್ಯವಾಗಲಿ, ಇತರ ಸೌಲಭ್ಯಗಳಾಗಲಿ ಇಲ್ಲದೆ ದಟ್ಟ ದಾರಿದ್ರ್ಯದಲ್ಲಿ ನರಳುತ್ತಿದ್ದಾರೆ.

ವಿದ್ಯಾಭ್ಯಾಸದಲ್ಲೂ ನಮ್ಮ ದೇಶ ಬಹಳ ಹಿಂದೆ ಬಿದ್ದಿದೆ. ಶೇಕಡಾ 75 ರಷ್ಟು ಜನ ಅನಕ್ಷರಸ್ಥರಾಗಿದ್ದಾರೆ.

ಕಾಂಗ್ರೆಸ್ ಸರಕಾರ ಎಲ್ಲ ಕ್ಷೇತ್ರಗಳಲ್ಲೂ ಜನವಿರೋಧಿ ಧೋರಣೆಗಳನ್ನನುಸರಿಸುತ್ತಿದೆ. ಇದನ್ನು ಪ್ರತಿಭಟಿಸಿ ರೈತರೂ, ಕಾರ್ಮಿಕರೂ, ವಿದ್ಯಾರ್ಥಿಗಳೂ ಇತರ ಜನ ವಿಭಾಗದವರೂ ಸಂಘಟಿತರಾಗಿ ಹೋರಾಡುತ್ತಿದ್ದಾರೆ.

ಈ ವರ್ಷದ ಸ್ವಾತಂತ್ರ್ಯ ದಿನೋತ್ಸವದ ಸಂದರ್ಭದಲ್ಲಿ ಇತರ ಕೆಲವು ಮುಖ್ಯ ಬೆಳವಣಿಗೆಗಳನ್ನೂ ಗಮನಿಸುವುದಗತ್ಯ.

ವಿದೇಶೀ ಶಕ್ತಿಗಳು ನಮ್ಮ ದೇಶದ ಹಲವು ಪ್ರದೇಶಗಳಲ್ಲಿ ತಮ್ಮ ದುಷ್ಟ ಚಟುವಟಿಕೆಗಳನ್ನೂ ಪಿತೂರಿಗಳನ್ನೂ ನಡೆಸುತ್ತಿದ್ದು ವಿಚ್ಛಿದ್ರಕಾರಿ ಶಕ್ತಿಗಳಿಗೆ ಪ್ರೋತ್ಸಾಹ ಕೊಡುತ್ತಿವೆ. ಇದರಿಂದ ದೇಶದ ಐಕ್ಯತೆಗೂ ಸಮಗ್ರತೆಗೂ ಧಕ್ಕೆ ತಗಲುವಂತಾಗಿದೆ. ಈ ಶಕ್ತಿಗ

(8ನೇ ಪುಟ ನೋಡಿ)

ಐಕ್ಯರಂಗದ ಕಳೆದ ಒಂಬತ್ತು ಸಂಚಿಕೆಗಳಲ್ಲಿ ನಾವು ಪ್ರಕಟಿಸಿದ ಮತ್ತು ಪ್ರಸಕ್ತ ಸಂಚಿಕೆಯೊಂದಿಗೆ ಮುಕ್ತಾಯಗೊಳ್ಳುತ್ತಿರುವ, ಅರುಣ್ ಶೌರಿಯ ಆಪಾದನೆಗಳಿಗೆ ಉತ್ತರ ರೂಪವಾಗಿ ಕಾ. ಬಸವಪುನ್ನಯ್ಯನವರು ಬರೆದ ಇಂಗ್ಲಿಷ್ ಲೇಖನವನ್ನು ಶ್ರಮವಹಿಸಿ, ಸಮರ್ಥವಾಗಿ ಕನ್ನಡಕ್ಕೆ ಅನುವಾದಿಸಿ ಕೊಟ್ಟವರು ಸಂಗಾತಿ ಎನ್. ಕೆ. ವೇದರಾಜ್ ಅವರು. ಅವರಿಗೆ "ಐಕ್ಯರಂಗ" ಆಭಾರಿಯಾಗಿದೆ.

— ಎನ್. ಕೆ. ಉಪಾಧ್ಯಾಯ

ಕರ್ನಾಟಕ ರಾಜ್ಯದಲ್ಲಿ

ಅಜೀಜ್‌ಸೇಠ್ - ಚಂದ್ರಪ್ರಭಾ ಅವರ ಕ್ರಮವನ್ನು ಖಂಡಿಸಿರಿ

ಅಜೀಜ್‌ಸೇಠ್ ಮತ್ತು ಚಂದ್ರಪ್ರಭಾ ಅರಸ್ ಇವರಿಬ್ಬರೂ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಜನತಾ ಶಾಸಕಾಂಗ ಪಕ್ಷದಿಂದಲೂ ಹೊರ ನಡೆದಿದ್ದಾರೆ. ಇವರ ಕ್ರಮ ಅತ್ಯಂತ ನಾಚಿಕೆಗೇಡಿನದ್ದು ಮತ್ತು ಖಂಡನೀಯ.

ಕರ್ನಾಟಕ ರಾಜ್ಯದಲ್ಲಿ ತಳಊರಿದ್ದ ಕಾಂಗ್ರೆಸ್ಸನ್ನು ಸೋಲಿಸುವ ಕಾರ್ಯದಲ್ಲಿ ಈ ಮಂತ್ರಿದ್ವಯರು ಪಾಲುಗಾರರಾಗಿದ್ದರು. ಕಳೆದ ಹದಿನೆಂಟು ತಿಂಗಳ ಹೆಗಡೆ ಸರಕಾರದ ಆಡಳಿತೆಯಲ್ಲಿ—ಒಳ್ಳೆಯದಿರಲಿ – ಕೆಟ್ಟದಿರಲಿ—ಇವರೂ ಸಹಭಾಗಿಗಳೇ. ತಮ್ಮನ್ನು ದಬಾಯಿಸಲಾಗಿದೆ, ಬಾಯಿಮುಚ್ಚಿಸಲಾಗಿದೆ, ಮೂಲೆಗುಂಪು ಮಾಡಲಾಗಿದೆ ಎಂಬ ಯಾವುದೇ ರೀತಿಯ ಆರೋಪ ಇವರಿಂದ ಇಷ್ಟು ತಿಂಗಳಲ್ಲಿ ಕೇಳಿ ಬರಲಿಲ್ಲ. ತನ್ನ ಆರೋಗ್ಯ ದೃಷ್ಟಿಯಿಂದ "ಹಗುರವಾದ" ಖಾತೆ ಬೇಕೆಂದು ಅಜೀಜ್‌ಸೇಠ್ ಹೇಳಿದ್ದರು. ಕ್ಯಾಬಿನೆಟ್ ಮಂತ್ರಿಯಾಗಿಯೇ ಮುಂದುವರಿಯುವ ಆಸೆ ವ್ಯಕ್ತ ಮಾಡಿದ್ದರು. ತಾನು ಕ್ಯಾಬಿನೆಟ್ ಮಂತ್ರಿಯಾಗಿದ್ದು, ಮಂತ್ರಿಮಂಡಲದ ಸಭೆಯಲ್ಲಿ ಏನೂ ವಿರೋಧ ವ್ಯಕ್ತಮಾಡದೆ, ಶಾಸನ ಸಭೆಯಲ್ಲಿಯೂ ಯಾವುದೇ ವಿರೋಧ ಅಭಿಪ್ರಾಯ ಹೇಳದೆ, ಎರಡೂ ಸದನಗಳಲ್ಲಿ ಸಾಕಷ್ಟು ಚರ್ಚೆಯ ನಂತರ, ವಿರೋಧ ಪಕ್ಷಗಳ ಕೆಲವು ತಿದ್ದುಪಡಿಗಳೊಂದಿಗೆ ಶಿಕ್ಷಣ ಮಸೂದೆ ಪಾಸಾಗಿ ರಾಷ್ಟ್ರಾಧ್ಯಕ್ಷರ ಮಂಜೂರಾತಿಗಾಗಿ ಕಳುಹಿಸಿಕೊಟ್ಟ ನಂತರ, ಹಿಂದಿನ ಘಟನೆಗಳಿಗೂ ತನಗೂ ಏನೂ ಸಂಬಂಧವೇ ಇಲ್ಲದ ರೀತಿಯಲ್ಲಿ ಸೇಠ್ ಮಹಾಶಯರು ಆ ಮಸೂದೆಗೆ ರಾಷ್ಟ್ರಾಧ್ಯಕ್ಷರು ಸಹಿ ಹಾಕಬಾರದೆಂದು ಪತ್ರ ಬರೆದಾಗ, ಮಂತ್ರಿಮಂಡಲದಿಂದ ಅಂಥ ವ್ಯಕ್ತಿಯನ್ನು ಹೊರಗೆ ತಳ್ಳದೆ ಭಿನ್ನಾಭಿಪ್ರಾಯ ವ್ಯಕ್ತ ಮಾಡುವುದು ದೊಡ್ಡ ತಪ್ಪೇನಲ್ಲೆಂದು ಹೇಳಿ ರಾಮಕೃಷ್ಣ ಹೆಗಡೆಯವರು ಸೇಠ್‌ರನ್ನು ಉಳಿಸಿದರು. ತಾನು ರಾಜೀನಾಮೆ ಕೊಡುವ ದಿವಸ ಈ ಮನುಷ್ಯ ಹೆಗಡೆಯವರಿಗೆ ಭೆಟ್ಟಿಯಾದಾಗಲೂ ಕೂಡ ರಾಜೀನಾಮೆ ಕೊಡುತ್ತೇನೆಂದು ಹೇಳುವ ಸೌಜನ್ಯತೆ ತೋರ್ಪಡಿಸಲಿಲ್ಲ. ಇಂಥ ವ್ಯಕ್ತಿಗಳು ರಾಜಕೀಯದಲ್ಲಿ ಉಳಿಯಲು ಯೋಗ್ಯರೇ?

ಚಂದ್ರಪ್ರಭಾ ತಾನೇ ಸಮಾಜ ಕಲ್ಯಾಣ ಸಚಿವೆಯಾಗಿದ್ದು, ಹಿಂದುಳಿದವರಿಗೆ, ಹರಿಜನ-ಗಿರಿಜನರಿಗೆ, ಅಲ್ಪಭಾಷಿಕರಿಗೆಲ್ಲ ಜನತಾ ಸರಕಾರದಿಂದ ಅನ್ಯಾಯವಾಗಿದೆಂದು ಹೇಳುತ್ತಿದ್ದೆಂದರೆ ತನ್ನ ಸ್ವಂತ ಆಡಳಿತೆಯ ವಿಫಲತೆಯನ್ನು ಒಪ್ಪಿಕೊಂಡಂತೆಯೇ ಸರಿ. ತನ್ನ ಖಾತೆಗೆ ಸಾಕಷ್ಟು ಹಣ ಲಭ್ಯವಾಗುತ್ತಿಲ್ಲ. ಬೇರೆ ಮಂತ್ರಿಗಳ ಕೈವಾಡ ನಡೆದಿದೆಂಬ ಯಾವ ತರದ ಆರೋಪವನ್ನೂ ಕಳೆದ 18 ತಿಂಗಳಲ್ಲಿ ಮಾಡದೆ, ಮುಖ್ಯಮಂತ್ರಿ ಜೊತೆ ವಿಶ್ವಾಸ ಕಳೆದುಕೊಂಡಿರುವುದರಿಂದ ರಾಜೀನಾಮೆ ಕೊಡದೆ ಬೇರೆ ವಿಧಿಯೇ ಇರಲಿಲ್ಲೆಂದು ಇವರು ಹೇಳುತ್ತಿರುವುದು ತಮ್ಮ ತಪ್ಪನ್ನು ಮುಚ್ಚುವುದರ ಸಲುವಾಗಿಯೇ ಎಂದು ಅರಿತುಕೊಳ್ಳಲು ಕಷ್ಟವೇನಿಲ್ಲ.

ತಮ್ಮ ಕ್ರಾಂತಿರಂಗವನ್ನು ಜನತಾ ಪಕ್ಷದಲ್ಲಿ ವಿಲೀನಗೊಳಿಸಿ, 18 ತಿಂಗಳು ಕ್ಯಾಬಿನೆಟ್ ಸದಸ್ಯರಾಗಿ ಕೆಲಸ ಮಾಡಿ ಈಗ ಇಂದಿರಾಗಾಂಧಿ ಜಾಲದಲ್ಲಿ ಸಿಕ್ಕಿ ಬಿದ್ದಿರುವ ಈ ಮಂತ್ರಿಗಳಿಬ್ಬರೂ ತಾವು ಜನತಾ ಶಾಸಕಾಂಗ ಪಕ್ಷದ ಸದಸ್ಯರೇ ಅಲ್ಲವೆಂದು ಹೇಳುತ್ತಿರುವಾಗ ಅವರ ನಾಲಿಗೆಗೆ ಕಾಯ್ದ ಕಬ್ಬಿಣದಿಂದ ಬರೆ ಕೊಡಬೇಕೇ? ಒತ್ತಲೆ ಮಾಡಿ ನಡುಬೀದಿಯಲ್ಲಿ ಮೆರೆಸಬೇಕೇ? ಜಮ್ಮು-ಕಾಶ್ಮೀರ ಸರಕಾರವನ್ನು ಉರುಳಿಸಿದನಂತರ ತಾಯಿ ಮತ್ತು ಮಗ [ಇಂದಿರಾ ಮತ್ತು ರಾಜೀವ] ಇಬ್ಬರೂ ಕರ್ನಾಟಕ ಪ. ಬಂಗಾಲ, ತ್ರಿಪುರ ಹಾಗೆಯೇ ಆಂಧ್ರಗಳ ಸರಕಾರಗಳನ್ನುರುಳಿಸುವ ಆಳವಾದ ಗಾಳ ಹೂಡಿದ್ದಾರೆ. ರಾಜಕಾರಣದಲ್ಲಿ ನಾಚಿಕೆ, ನೀತಿಗಳೆಂಬುದೇ ಇಲ್ಲವೆಂದು ಸಿದ್ಧ ಮಾಡಿರುವ ಅಜೀಜ್ ಸೇಠರು ದಿಲ್ಲಿ ದರ್ಬಾರಿನಲ್ಲಿ ಪಾಲುಗಾರರಾಗುವ ಕನಸು ಕಾಣುತ್ತಿದ್ದಾರೆ. ಇಂದಿರಾಗಾಂಧಿಗೆ ತನ್ನ ಸರ್ವಸ್ವವನ್ನು ಬಲಿಕೊಟ್ಟ ತನ್ನ ತಂದೆ ದೇವರಾಜ ಅರಸು ಅವರ ಚರಿತ್ರೆಯನ್ನಾದರೂ ನೋಡಿ ಚಂದ್ರಪ್ರಭಾ ಪಾಠ ಕಲಿಯಬೇಕಿತ್ತು. ಹಿಂದುಳಿದವರ ಸಂಘಟನೆಯಲ್ಲಿ ಎಡ ಪಕ್ಷಗಳೂ ಅರಸು ಜೊತೆಯಲ್ಲಿ ಸಹಕರಿಸಲು ತಯಾರಾಗಿದ್ದಾಗ, ತನ್ನ ತಂದೆಗೂ, ಕರ್ನಾಟಕದ ಮತದಾರರಿಗೂ ದ್ರೋಹ ಬಗೆಯುವಂಥ ಕ್ರಮವನ್ನು ಖಂಡಿಸಲು ಶಬ್ದಗಳೇ ಸಿಗದಂತಾಗಿದೆ.

ಈ ಮಂತ್ರಿಗಳ ರಾಜೀನಾಮೆಯ ಸಂಬಂಧ ಹೆಗಡೆಯವರು ಇವರಿಬ್ಬರಿಗೆ ಬರೆದ ಪತ್ರದ ಒಕ್ಕಣಿಗೆಯನ್ನು ಓದುವಾಗ, ಹೆಗಡೆಯವರೂ ಸಂಪೂರ್ಣ ನಿರಪರಾಧಿಯೆಂದು ಹೇಳಲಿಕ್ಕಾಗುವುದಿಲ್ಲ. ಚಂದ್ರಪ್ರಭಾ ಪ್ರತ್ಯೇಕ ಕ್ರಾಂತಿರಂಗ ಕಚೇರಿಯನ್ನು ನಡೆಸುತ್ತ ಬಂದಿದ್ದರಂತೆ, ಕಾಂಗ್ರೆಸ್ಸಿನ ಜೊತೆಯಲ್ಲಿ ಸಂಬಂಧ ಇಟ್ಟುಕೊಂಡಿದ್ದರಂತೆ, ಶಾಸಕರನ್ನು ಪ್ರತ್ಯೇಕ ಭೆಟ್ಟಿಯಾಗಿ ಚರ್ಚಿಸುತ್ತಿದ್ದರಂತೆ. ಅದರಂತೆಯೇ ಅಜೀಜ್ ಸೇಠ್‌ರು ಸಂಚಾರಕ್ಕೆ ಹೋದಲ್ಲೆಲ್ಲ ಕಾಂಗ್ರೆಸ್ ಮುಸ್ಲಿಂ ಮುಖಂಡರೇ, ಅವರ ಸಂಗಡ ಇರುತ್ತಿದ್ದರು. ನಿಕಟ ಸಂಬಂಧ ಹೊಂದಿದ್ದರು. ಅಷ್ಟೇ ಅಲ್ಲದೆ ಇಡೀ ಸರಕಾರಕ್ಕೆ, ಶಾಸನ ಸಭೆಗೆ ಅವಮಾನ ಮಾಡುವ ರೀತಿಯಲ್ಲಿ ಶಿಕ್ಷಣ ಮಸೂದೆಗೆ ಒಪ್ಪಿಗೆ ನೀಡಬಾರದೆಂದು ರಾಷ್ಟ್ರಾಧ್ಯಕ್ಷರಿಗೆ ಪತ್ರ ಬರೆದು, ಜಾತೀಯ ಭಾವನೆಗೆ ಪ್ರಚೋದನೆ ನೀಡಿದ್ದರು. ಶಿಸ್ತನ್ನು ಉಲ್ಲಂಘಿಸಿದ್ದರು. ಕೆಲವು ಕ್ಯಾಬಿನೆಟ್ ಸದಸ್ಯರು ಈ ರೀತಿ ವರ್ತಿಸುತ್ತಿದ್ದಾಗ, ತಮ್ಮ ಪಕ್ಷದೊಳಗೆ, ಶಾಸಕಾಂಗ ಪಕ್ಷದಲ್ಲಿ, ಕ್ಯಾಬಿನೆಟ್ ಸಭೆಯಲ್ಲಿ ಇವುಗಳ ಕುರಿತು ಚರ್ಚಿಸಿ ದೃಢ ನಿಲುವು ತಾಳಬೇಕಿತ್ತು. ಶಿಸ್ತುಭಂಗ ಕ್ರಮ ಕೈಗೊಳ್ಳಲು ಹಿಂಜರಿಯಬಾರದಿತ್ತು. ಬಿ.ಜೆ.ಪಿ. ಯ ಕುರಿತು "ಮೆತ್ತನೆ" ಧೋರಣೆ ಅನುಸರಿಸುತ್ತಿರುವಂತೆಯೇ ಪಾರ್ಟಿ ಶಿಸ್ತನ್ನು ಮುಂದು ಪಾರ್ಟಿಯೊಳಗೆ ಬಿರುಕನ್ನುಂಟು ಮಾಡಲು ಪ್ರಯತ್ನ ಮಾಡುತ್ತಿರುವುದನ್ನು ತಿಳಿದುಕೊಂಡಿದ್ದರೂ, ಸಕಾಲದಲ್ಲಿಯೇ ಅದನ್ನು ಸರಿಪಡಿಸಲಿಲ್ಲ, ಮಾತ್ರವಲ್ಲ ಸರಿಪಡಿಸಲು ಸಾಧ್ಯವಾಗದಿದ್ದರೆ ತೀವ್ರವಾದ ಶಿಸ್ತುಭಂಗ ಕ್ರಮ ತೆಗೆದುಕೊಳ್ಳುವ ಧೈರ್ಯವನ್ನಾದರೂ ತೋರಿಸಬೇಕಾಗಿತ್ತು. ಪಶ್ಚಿಮ ಬಂಗಾಲದ ಜ್ಯೋತಿ ಬಸು ಸರಕಾರದಲ್ಲಿ ಅಜೀಜ್‌ಸೇಠ್‌ರಂತ ಮಂತ್ರಿಗಳನ್ನು ಎರಡೇ ಸೆಕೆಂಡುಗಳಲ್ಲಿ ಕಿತ್ತೊಗೆಯಲಾಗುತ್ತಿತ್ತೆಂದು ಸಿಪಿಐ (ಎಂ) ಮುಖಂಡ ಬಿ. ಟಿ. ರಣದಿವೆ ಹೇಳಿರುವ ಮಾತಿನ ಅರ್ಥ ಹೆಗಡೆಯವರು ಮಾಡಿಕೊಂಡಿಲ್ಲ. ಜಾತಿ-ಧರ್ಮಗಳ ಗುಂಪುಗಳಿಂದ ಸುತ್ತುವರಿದಿರುವ ರಾಮಕೃಷ್ಣ ಹೆಗಡೆಯವರಾಗಲೀ, ಜನತಾ ಪಕ್ಷವಾಗಲೀ ಪಶ್ಚಿಮ ಬಂಗಾಲದ ಜ್ಯೋತಿ ಬಸು ಅಥವಾ ಎಡರಂಗದ ನಿಲುವು ಅನುಸರಿಸುತ್ತಾರೆಂದು ನಾನೇನೂ ತಿಳಿದಿಲ್ಲ. ಆದರೆ ಜನತೆಯ, ಪಕ್ಷದ, ಸರಕಾರದ ಹಿತದ ದೃಷ್ಟಿಯಿಂದ, ಪಕ್ಷದೊಳಗೆ ಶಿಸ್ತು ಅತ್ಯಗತ್ಯ, ತನ್ನ ಮಂತ್ರಿಮಂಡಲದ ಸಹೋದ್ಯೋಗಿಗಳು, ಸರಕಾರದ ನಿರ್ಣಯವನ್ನು ವಿರೋಧಿಸಿದಾಗಲೂ [ಅಜೀಜ್ ಸೇಠ್], ಕಾಂಗ್ರೆಯೊಡನೆ ಚೆನ್ನಾಟವಾಡುತ್ತಿರುವಾಗಲೂ (ಚಂದ್ರಪ್ರಭಾ) ಯಾವುದೇ ಕ್ರಮ ತೆಗೆದುಕೊಳ್ಳದೆ, ಸಾರ್ವಜನಿಕರಲ್ಲಿ ಅವರನ್ನು ಬಯಲುಗೊಳಿಸದಿರುವುದು ಹೆಗಡೆಯವರ, ಜನತಾ ಪಕ್ಷದ ದೊಡ್ಡ ತಪ್ಪೆಂದೇ ಹೇಳಬೇಕಾಗುತ್ತದೆ.

ಕಾಂಗ್ರೆಸ್ಸನ್ನು ಸೋಲಿಸುವುದರಲ್ಲಿ ಕರ್ನಾಟಕದ ಮತದಾರರು, ರೈತ-ಕಾರ್ಮಿಕರು ಚಾರಿತ್ರಿಕವಾದ ಮಹತ್ವದ ಪಾತ್ರವಹಿಸಿದ್ದರೆಂಬುದನ್ನು ಜನತಾ ಮುಖಂಡರೂ, ಹೆಗಡೆಯವರೂ ತಿಳಿಯಬೇಕಾದ್ದು ಅತ್ಯಗತ್ಯ. ಪಶ್ಚಿಮ ಬಂಗಾಲ, ತ್ರಿಪುರಾಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ತನ್ನ ಅಧಿಕಾರ ಉಳಿಸಿಕೊಳ್ಳಲು ಹೇಗೆ ಸಾಧ್ಯವಾಗಿದೆಂಬುದನ್ನು ಕರ್ನಾಟಕದ ಜನತಾ ಪಕ್ಷ ಕಲಿಯುವುದು ಅಗತ್ಯ. ಪಶ್ಚಿಮ ಬಂಗಾಲದಲ್ಲಿ ಕಾಂಗ್ರೆಸ್ಸಿನವರು ಬೀದಿ ಕಾಳಗವನ್ನೇ ನಡೆಸಿ, ಕೊಲೆ ಮಾಡಿ ರಕ್ತ ಹರಿಸುವ ತನಕ ಹೋಗಿದ್ದರು. ಜ್ಯೋತಿ ಬಸು ಸರಕಾರವನ್ನುರುಳಿಸಲಿಕ್ಕೆ ಅಂಥ ಕಾಳಗವನ್ನು ಜನತೆ ಧೈರ್ಯದಿಂದ ಎದುರಿಸಿತ್ತು, ಈಗಲೂ ಎದುರಿಸುತ್ತಲೇ ಇದೆ. ಪ. ಬಂಗಾಲದ ಸಿಪಿಐ [ಎಂ] ಮತ್ತು ಎಡ ಪಕ್ಷಗಳ ರಂಗದಲ್ಲಿ ಒಡಕುಂಟು ಮಾಡಿ ಸರಕಾರ ಉರುಳಿಸುವುದೇನೂ ಸುಲಭ ಸಾಧ್ಯವಲ್ಲೆಂದು ತಿಳಿದು, ಸಿಪಿಐ [ಎಂ] ತನ್ನ ಪಕ್ಷದವರನ್ನೇ ಸರಕಾರಿ ನೌಕರಿಯಲ್ಲಿ ನೇಮಕ ಮಾಡಿಕೊಳ್ಳುತ್ತಿದೆ, ಪಶ್ಚಿಮ ಬಂಗಾಲದಂಥ ಗಡಿ ಪ್ರದೇಶದಲ್ಲಿ ಇಂಥ ನೀತಿ ದೇಶದ ಸಮಗ್ರತೆಗೆ ಅಪಾಯಕಾರಿ ಎಂಬ ಹೊಸ ಘೋಷಣೆಯನ್ನು ರಾಜೀವ ಗಾಂಧಿ ಲೋಕಸಭೆಯಲ್ಲಿ ಘೋಷಿಸಿ, ಕಾಶ್ಮೀರದ ನಂತರ ಪ. ಬಂಗಾಲವನ್ನು ತಮ್ಮ ಗುರಿಯಾಗಿಟ್ಟುಕೊಂಡಿದ್ದೇವೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಪ. ಬಂಗಾಲದಲ್ಲಿ "ಷಾ" "ಸೇಠ್" ರಂತವರ ಅಭಾವವಿರುವುದರಿಂದ ರಾಜಕೀಯ ಕಾರಣ ಮುಂದೆ ಮಾಡಲಾಗುತ್ತಿದೆ.

ಸೇಠ್, ಚಂದ್ರಪ್ರಭಾ ಅವರ ನಡತೆಯಿಂದ ಕರ್ನಾಟಕದ ಕಾಂಗ್ರೆಸ್ ಮುಖಂಡರಲ್ಲಿ ಕುರ್ಚಿ ಆಕ್ರಮಿಸುವ ಹೊಸ ಆಸೆ ಚಿಗುರಿಸಿದೆ. ಶ್ರೀಕಂಠಯ್ಯ, ಗುಂಡೂರಾವ್, ಮೊಯಿಲಿ, ಕೆ.ಎಚ್. ಪಾಟೀಲ್ ಗುಂಪುಗಳೆಲ್ಲ ಒಂದಾಗಿವೆ. ಹಣದ ಬಲದಿಂದಷ್ಟೇ ಹೆಗಡೆ ಸರಕಾರವನ್ನು ಉರುಳಿಸುವಲ್ಲಿ ವಿಫಲಗೊಂಡ ಕಾಂಗ್ರೆಸ್ ಮುಖಂಡರು ಅಜೀಜ್‌ಸೇಠ್, ಚಂದ್ರಪ್ರಭಾರವರ ನಡಾವಳಿಕೆಯಿಂದ ಸ್ಫೂರ್ತಿಗೊಂಡು ರಭಸದಿಂದ ಕುದುರೆ ಆಟ ಪ್ರಾರಂಭಿಸಿದ್ದಾರೆ. 38 ಜನತಾ ಶಾಸಕರ ಒತ್ತಾಯಕ್ಕೆ ಮಣಿದು ಎಲ್ಲ ಮಂತ್ರಿಗಳು ತಮ್ಮ ರಾಜೀನಾಮೆಯನ್ನು ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ನೆವ ಮುಂದೆ ಮಾಡಿ ದಿಲ್ಲಿ ಕಾಂಗ್ರೆಸ್ ಲೋಕಸಭೆ ಸದಸ್ಯರು ಹೆಗಡೆ ಸರಕಾರ ಉರುಳಿಸಲು ಪ್ರಯತ್ನ ನಡೆಸಿದ್ದಾರೆ. ಜನತಾ ಪಕ್ಷದ ಮುಖಂಡರ ನಡತೆ ಮತ್ತು ಹೆಗಡೆಯವರ ಅಸ್ಥಿರ ನಿಲುವು ಇಂದಿರಾ ಕಾಂಗ್ರೆಸ್ ಮುಖಂಡರ ಒಳ ಸಂಚಿಗೆ ಸಹಾಯವಾಗುತ್ತಿದೆ.

ಹೆಗಡೆಯವರು ಧೈರ್ಯದ ನಿಲುವು ತಾಳಬೇಕು. ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು, ಇಂದಿರಾ ಸರ್ವಾಧಿಕಾರದ ವಿರುದ್ಧ ಹೆಗಡೆ ಸರಕಾರವನ್ನು ಉಳಿಸಲು ಸಹಾಯ ಮಾಡುತ್ತವೆ.

ಸೇಠ್, ಚಂದ್ರಪ್ರಭಾ ಅವರ ನೀಚ ಕೃತಿಯನ್ನು ಖಂಡಿಸಲಿಕ್ಕೆ ಎಲ್ಲರೂ ಮುಂದಾಗಬೇಕು. ಕಾಂಗ್ರೆಸ್ ಕುತಂತ್ರವನ್ನೆದುರಿಸಲು ಸಿದ್ಧರಾಗಬೇಕು.

ಇಂದಿರಾ ಗಾಂಧಿಯ ಅಪಾಯಕಾರಿ ನೀತಿಯಿಂದಾಗಿ ಪಂಜಾಬಿನಲ್ಲಿ ನಾಗರೀಕ ಆಡಳಿತೆ ಕೊನೆಗೊಂಡು ಮಿಲಿಟರಿ ಆಡಳಿತೆ ನಡೆಯುತ್ತಿದೆ, ಕಾಶ್ಮೀರದ ಡಾ. ಫರೂಕ್ ಅಬ್ದುಲ್ಲಾ ಸರಕಾರ ಕಿತ್ತೊಗೆಯಲ್ಪಟ್ಟಿದೆ. ಕಾಂಗ್ರೆಸ್ ವಿರೋಧಿ ಸರಕಾರಗಳನ್ನು ಅಭದ್ರಗೊಳಿಸುವ ತೀವ್ರ ಕ್ರಮಗಳು ನಡೆದಿವೆ ಇಡೀ ದೇಶದ ಸಮಗ್ರತೆಗೆ ಕಂಟಕಪ್ರಾಯವಾದ ಇಂದಿರಾ ಸರಕಾರದ ಇಂಥ ನೀತಿಯನ್ನು ಬಯಲಿಗೆಳೆದು, ಜನರಲ್ಲಿ ಜಾತೀಯ ಸೌಹಾರ್ದತೆ ಭಾವನೆ ಬೆಳೆಸಿ ಬರುವಂತೆಯೂ, ಛಿದ್ರಕಾರಿ ಶಕ್ತಿಗಳ ವಿರುದ್ಧ ಇಂದಿರಾ ಸರ್ವಾಧಿಕಾರದ ವಿರುದ್ಧ, ಕಾಂಗ್ರೆಸ್ಸೇತರ ಸರಕಾರಗಳನ್ನು ಉರುಳಿಸುವ ಕುತಂತ್ರದ ವಿರುದ್ಧ ಜನಜಾಗೃತಿಯನ್ನುಂಟು ಮಾಡಲು ಸಿಪಿಐ (ಎಂ) ಸಿಪಿಐ ಜೊತೆಯಲ್ಲಿ ಜನತಾ ಪಕ್ಷದವರೂ ಸೇರಿ ಪ್ರಚಂಡ ಜನಜಾಗೃತಿಯ ಕಾರ್ಯಕ್ರಮ ಹಮ್ಮಿಕೊಳ್ಳುವ ಅಗತ್ಯವನ್ನು ಹೋದವಾರ ಮುಖ್ಯಮಂತ್ರಿ ಹೆಗಡೆಯವರಿಗೆ ಮನದಟ್ಟು ಮಾಡಿಕೊಟ್ಟಿದ್ದೇವೆ. ಮುಂಬರುವ ಲೋಕಸಭೆ ಚುನಾವಣೆಯ ದೃಷ್ಟಿಯಿಂದ ಈ ತರದ ಪ್ರಚಾರ-ಪ್ರಕ್ಷೋಭೆ ಚಳವಳಿ ಅತ್ಯಗತ್ಯ.

★

ಭಾರತೀಯ ವಕೀಲರಿಂದ ಚೀನಾ ಸಂದರ್ಶನ

ಅಖಿಲ ಭಾರತ ವಕೀಲರ ಸಂಘದ ಪರವಾಗಿ, ನ್ಯಾಯಾಧೀಶರಾದ ಎಚ್. ಆರ್. ಖನ್ನಾ, ಹರದೇವ ಸಿಂಗ್, ದಿಲೀಪ್ ಗುಪ್ತಾ, ಅಶೋಕ ಚಕ್ರವರ್ತಿ, ಶರ್ಮಾ, ಗರಾನ್, ಡಿಲಾನ್, ಟಿ. ಎನ್. ಬಾಲಾಜಿ (ಕರ್ನಾಟಕ) ರಾಧಾಕೃಷ್ಣನ್, ರಾಥೋರ ಇವರನ್ನು ಸಮಾಜವಾದಿ ಚೀನಾ ದೇಶಕ್ಕೆ ಇದೇ ವರ್ಷ ನವೆಂಬರ್ ತಿಂಗಳಲ್ಲಿ ಕಳುಹಿಸಿ ಕೊಡಲು ನಿರ್ಧರಿಸಲಾಗಿದೆ.

ಯು. ಜಿ. ಎಸ್. ವರದಿ

— ಗುರುಶಾಂತ್ ಎಸ್. ವೈ.

ಶಿಕ್ಷಣ ಕ್ಷೇತ್ರದೊಳಗೆ ಸರ್ವಾಧಿಕಾರದ ಪ್ರವೇಶ

ಅನ್ಯಾಯ, ಅಸಮಾನತೆ, ವರ್ಗ ವೈರುಧ್ಯವುಳ್ಳ ನಮ್ಮ ದೇಶದ ವ್ಯವಸ್ಥೆಯ ಒಂದು ಭಾಗವೇ ಆಗಿರುವ "ಶಿಕ್ಷಣ ಪದ್ಧತಿ" ಅದರ ಕಾರ್ಯ ವೈಖರಿಯಲ್ಲಿಯೂ ಈ ಲಕ್ಷಣಗಳು ವ್ಯಕ್ತವಾಗುವವು. ನೈಜ ಫಲವನ್ನು ನೀಡುವಲ್ಲಿ ಅಸಮರ್ಥವಾಗಿ ಆಳವಾದ ಬಿಕ್ಕಟ್ಟನ್ನು ಎದುರಿಸುತ್ತಿರುವ ಆಳುವ ವರ್ಗ ಇದರಿಂದ ಪಾರಾಗಲು ಪ್ರಯತ್ನಿಸುತ್ತದೆ. ಆದರೆ ವರ್ಗ ವಿಭಜನೆಯ ಆಧಾರದಲ್ಲಿ ರಚಿತಗೊಂಡಿರುವ ಯಾವುದೇ ಸಮಾಜ ವ್ಯವಸ್ಥೆಯು ಜನತೆಯ ಸಮಸ್ಯೆಗಳನ್ನು ಬಗೆಹರಿಸಲು ಅಸಮರ್ಥವಾಗಿರುತ್ತದೆ. ಆದುದರಿಂದ ಇವೆಲ್ಲವುಗಳ ನಡುವೆಯೇ ಆಗಾಗ ವಿಶ್ವವಿದ್ಯಾನಿಲಯಗಳ ಸುಧಾರಣೆಗೆಂದು ಹೊಸ ಹೊಸ ಸಮಿತಿಗಳ ರಚನೆಯನ್ನು ಆಳುವ ವರ್ಗ ತನ್ನ ನೀತಿಗನುಗುಣವಾಗಿ ನಿರೂಪಿಸುತ್ತಲೇ ಇದೆ. ಇವುಗಳ ಫಲಿತಾಂಶವೆಂದರೆ ಗೊಂದಲ ಗೋಜಲುಗಳ ನಿರ್ಣಯಗಳು ರೂಪಿತವಾಗಿ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಹೆಚ್ಚಾಗಿ ದಮನಿಸುವುದೇ "ಪ್ರಗತಿಪರ" ಕ್ರಮಗಳೆಂಬ ಹೆಸರು ಹೊತ್ತು ಜಾರಿಯಾಗುತ್ತವೆ. "ಆಸ್ಪತ್ರೆ ಮತ್ತು ಇತರೆ ಸಂಸ್ಥೆಗಳಿಗೆ" ಸಂಬಂಧಿಸಿದಂತಹ ಮಸೂದೆಯೊಂದು ಪಾರ್ಲಿಮೆಂಟಿನ ಒಪ್ಪಿಗೆಯ ಸಲುವಾಗಿ ಈಗಾಗಲೇ ಕಾದು ಕುಳಿತಿದೆ. "ತಿದ್ದುಪಡಿಯಾದ ವಿಶ್ವಭಾರತಿ ಮಸೂದೆ"ಯು ಒಪ್ಪಿಗೆಯ ಮುದ್ರೆ ಹಾಕಿಸಿಕೊಂಡಿದೆ. ಇಷ್ಟೆಲ್ಲವುಗಳು ಆದಗ್ಯೂ ಕೇಂದ್ರೀಯ ವಿಶ್ವವಿದ್ಯಾನಿಲಯಗಳ ಆಡಳಿತಕ್ಕೆ ಸಂಬಂಧಿಸಿದಂತೆ ಪೋಲೀಸ್ ಆಯೋಗ ಮತ್ತು ಪುನರ್ ವಿಮರ್ಶನಾ ಸಮಿತಿ" ಗಳ ಆರು ಸದಸ್ಯರುಗಳನ್ನುಳ್ಳ ಕೇಂದ್ರೀಯ ವಿಶ್ವ ವಿದ್ಯಾನಿಲಯಗಳ ಪುನರ್ ವಿಮರ್ಶನಾ ಸಮಿತಿ" ಯನ್ನು [ಸಿ. ಯು. ಆರ್. ಸಿ.] ಯುನಿವರ್ಸಿಟಿ ಗ್ರಾಂಟ್ಸ್ ಕಮೀಷನ್"[ಯು.ಜಿ.ಸಿ.] 1981 ರಲ್ಲಿ ನೇಮಕ ಮಾಡಿತು.

ಆಡಳಿತಾತ್ಮಕ ಹಾಗೂ ಶೈಕ್ಷಣಿಕ "ಸುಧಾರಣೆ" ಯ ಹೆಸರಿನಲ್ಲಿ ಪ್ರಜಾಪ್ರಭುತ್ವೀಯ ಶಕ್ತಿಗಳ ಕುತ್ತಿಗೆ ಹಿಸುಕಲು ಅಗತ್ಯವಿರುವ ಎಲ್ಲಾ ಕರಾಳ ಕ್ರಮಗಳನ್ನು ಸೂಚಿಸಿದ ವರದಿಯು (ಸಿ. ಯುಆರ್.ಸಿ) ಮಂಡಿತವಾಗಿದ್ದು ಪಾರ್ಲಿಮೆಂಟಿನ ಬಹುಪಾಲು "ಹೌದಪ್ಪ" ಗಳ ಒಪ್ಪಿಗೆಗೆ ಕಾದು ಕುಳಿತಿದೆ. ಕೇಂದ್ರೀಯ ವಿಶ್ವವಿದ್ಯಾನಿಲಯಗಳಲ್ಲಿನ "ಕಾನೂನು ಮತ್ತು ಶಿಸ್ತು" ಪರಿಪಾಲನೆಗೆ "ಪರಿಹಾರೋಪಾಯ" ವೆಂದು ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಹೇಗೆ ನಗ್ನ ಆಕ್ರಮಣ ಮಾಡಬೇಕೆಂದು ಈ ವರದಿಯು ಸೂಚಿಸಿದೆ. ಈ ಬಗ್ಗೆಯೇ ಸಂಪುಟ ಗಟ್ಟಲೇ ದೀರ್ಘ ಚರ್ಚಿಸಿರುವ ವರದಿಯ ಕೆಲವು ಮುಖ್ಯಾಂಶಗಳು ಇಲ್ಲಿದೆ.

ಕೇಂದ್ರೀಯ ವಿಶ್ವವಿದ್ಯಾನಿಲಯಗಳಲ್ಲಿರುವ ಪ್ರಸಕ್ತ ಪ್ರವೇಶ ಕ್ರಮವನ್ನು ಅಸಂಬದ್ಧ ಕ್ರಮವೆಂದು ಕರೆದಿದೆ. ಇನ್ನು ಮುಂದೆ ಪ್ರವೇಶ ಕುರಿತಂತೆ "ಶಾಸನ ಬದ್ಧವಾದ" ಮಿತಿ ವಿಧಿಸಿದೆ. ಅದರಂತೆ ಕೇಂದ್ರೀಯ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಂಖ್ಯೆ ವಿಸ್ತರಿಸುವುದನ್ನು ನಿರ್ಬಂಧಿಸಲಾಗಿದೆ. ಅಗತ್ಯವಿರುವಷ್ಟು ವಿದ್ಯಾರ್ಥಿಗಳಿಗನುಗುಣವಾಗಿ ಪ್ರವೇಶ ಹೆಚ್ಚಿಸುವಂತಿಲ್ಲ. ಒಮ್ಮೆ ನಿರ್ಧರಿಸಿದ ಸಂಖ್ಯೆಯೇ ಅಂತಿಮವಾದದು. ಪ್ರವೇಶಾರ್ಹತೆ ಎಂದರೆ "ಮೆರಿಟ್" ಹೀಗಾಗಿ ದುರ್ಬಲ ವರ್ಗದವರಿಗೆ ಹಿಂದುಳಿದವರಿಗೆ ಮೀಸಲಾತಿಯಲ್ಲಿಯೂ ಹಿಂದಿಗಿಂತ ಕಡಿಮೆ ಅವಕಾಶಲಭ್ಯ.

ಈ ವರದಿಯ ಶಿಫಾರಸುಗಳನ್ನು ಜಾರಿಗೊಳಿಸಿದ್ದೇ ಆದರೆ ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಕೆಲಸಗಾರರು (ಶೈಕ್ಷಣಿಕ ಸಂಸ್ಥೆಯ) ತಮ್ಮ ನ್ಯಾಯ ಸಮ್ಮತ ಬೇಡಿಕೆಗಳಿಗಾಗಿ ಮುಷ್ಕರ ಹೂಡುವಂತಿಲ್ಲ. ಯಾವುದೇ ನಿಯತಕಾಲಿಕಗಳು, ಪತ್ರಿಕೆಗಳಿಗೆ ಲೇಖನಗಳನ್ನಾಗಲೀ ಕನಿಷ್ಟ ಒಂದು ಪತ್ರವನ್ನೂ ಬರೆಯಬಾರದೆಂದು "ನೀತಿ ಸಂಹಿತೆಯ" ಹೆಸರಿನಲ್ಲಿ ವರದಿಯು ನಿರ್ಬಂಧ ಹೇರಿದೆ. ಇದನ್ನು ವಿಚಾರಿಸಿಕೊಳ್ಳಲು ಅಧಿಕಾರಿಶಾಹಿಗಳ ಒಂದು ಸಮಿತಿಯನ್ನು ಉಪಕುಲಪತಿಗಳೇ ನೇಮಿಸಿರುತ್ತಾರೆ. ಅಂದರೆ ನ್ಯಾಯಕ್ಕಾಗಿ ನ್ಯಾಯಾಲಯಗಳಿಗೆ ಮೊರೆ ಹೋಗುವಂತಿಲ್ಲ. ವಿಶ್ವ ವಿದ್ಯಾಲಯದ ವಿಶೇಷ ಕೋರ್ಟುಗಳೇ "ಸರಿಯಾಗಿ" ವಿಚಾರಿಸಿಕೊಳ್ಳುತ್ತವೆ.

ಪೋಲೀಸರು ತಮ್ಮ ಕಾರ್ಯಾಚರಣೆ ನಡೆಸಲು ಶೈಕ್ಷಣಿಕ ಸಂಸ್ಥೆಯ ಪೂರ್ವಾನುಮತಿ ಇಲ್ಲದೆ ಒಳಗೆ ನುಗ್ಗಬಹುದು. ಪ್ರತಿ ಕೇಂದ್ರೀಯ ವಿಶ್ವವಿದ್ಯಾನಿಲಯಗಳಲ್ಲೆಲ್ಲಾ "ವಿಶ್ವವಿದ್ಯಾಲಯ ರಕ್ಷಣಾ ದಳ" ಎಂಬ ದಮನಕಾರೀ ಪಡೆಯು ರಚಿತವಾಗಿರುತ್ತದೆ. ಅಗತ್ಯವಾಗಿರುವಾಗಲೆಲ್ಲಾ ಧಾರಾಳವಾಗಿ ಇದನ್ನು ಬಳಸಿಕೊಳ್ಳಬಹುದು. ಇದು ಕೈಗಾರಿಕಾ ರಕ್ಷಣಾ ದಳದಂತೆ ಕಾರ್ಯ ನಿರ್ವಹಿಸಲಿದ್ದು, ಸೇವೆಯಿಂದ ನಿವೃತ್ತ ಹೊಂದಿದವರೂ ಮತ್ತು ಸಾರ್ವಜನಿಕ ಸಂಸ್ಥೆಗಳವರೂ ಇದರಲ್ಲಿ ಸೇರಿ ತಮ್ಮ " ಅಮೂಲ್ಯ ಸೇವೆ " ಅರ್ಪಿಸಿಕೊಳ್ಳಬಹುದು.

ವಿದ್ಯಾರ್ಥಿ ಸಂಘವನ್ನು ಪ್ರಜಾಪ್ರಭುತ್ವೀಯ ರೀತಿಯಲ್ಲಿ ಚುನಾಯಿಸುವಂತಿಲ್ಲ. ಹೀಗೆ ಆಯ್ಕೆಯಾಗಿರುವ ಸಂಘಗಳನ್ನು ರದ್ದು ಮಾಡಿ ಆಡಳಿತ ವರ್ಗ ತನಗೆ ಬೇಕಾದವರನ್ನುಳ್ಳ ಸಂಘವನ್ನು "ನಾಮಕರಣ" ಮಾಡಬಹುದು ಇನ್ನು ಉಳಿಯುವುದೆಂದರೆ, ಆಡಳಿತ ವರ್ಗದ ತಾಳಕ್ಕೆ ತಕ್ಕಂತೆ ಕುಣಿಯುವುದು ! ಮಾತ್ರ !

ವಿಶ್ವವಿದ್ಯಾನಿಲಯದ ಕಾರ್ಯಕಲಾಪಗಳಿಗೆ ಸಂಬಂಧಿಸಿದ ನಿರ್ಣಯಗಳನ್ನು ತೆಗೆದು ಕೊಳ್ಳುವ ಪ್ರಮುಖ ಅಂಗಗಳಾಗಿರುವ ಚುನಾಯಿತ "ಸೆನೆಟ್ ಅಥವಾ ಎಕ್ಸಿಕ್ಯೂಟೀವ್ ಕೌನ್ಸಿಲ್ ಗಳನ್ನು" ಹೊಸಕಿ ಹಾಕಲಾಗುವುದು.

ವರದಿಯು ಶಿಫಾರಸು ಮಾಡಿರುವ ಅಂಶಗಳಲ್ಲಿ ಇವು ಕೆಲವು ಮಾತ್ರ. ಪ್ರಜಾಸತ್ತಾತ್ಮಕ ಮೌಲ್ಯಗಳ ಮೇಲೆ ನಡೆದ ನಗ್ನ ಕ್ರೂರ ಆಕ್ರಮಣ ಇದು. ವಿಶ್ವವಿದ್ಯಾಲಯಗಳು ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಚಳುವಳಿಗೆ ಅತ್ಯಂತ ಪ್ರಮುಖ ಕೇಂದ್ರಗಳಾಗುತ್ತಿರುವುದನ್ನು ಕಂಡು ಪಟ್ಟಭದ್ರ ಹಿತಾಸಕ್ತಿಗಳು, ಸರ್ವಾಧಿಕಾರೀ ಶಕ್ತಿಗಳೂ ದೃತಿಗೆಡುತ್ತಿವೆ. ಆಳುವ ವರ್ಗದಲ್ಲಿ ತೀವ್ರವಾಗುತ್ತಿರುವ ಆರ್ಥಿಕ ಬಿಕ್ಕಟ್ಟು ದಗಾಖೋರತನವನ್ನು ಮುಚ್ಚಿಟ್ಟುಕೊಳ್ಳಲು ಹೆಣಗುತ್ತಿದೆ. ಈಗ ಮಂಡಿಸಿರುವ ನವೀನ ದಮನಕಾರೀ ಸೂಚನೆಗಳು ಆಳುವ ಕಾಂಗ್ರೆಸ್‌ಗೆ ಅದರ ಚುಕ್ಕಾಣಿ ಹಿಡಿದಿರುವ ಇಂದಿರಾ ಗಾಂಧಿಯವರಿಗೆ ಅಧಿಕಾರದಲ್ಲಿ ಉಳಿಯಲು ಬೇಕೇ ಬೇಕು. ಪಾರ್ಲಿಮೆಂಟಿನ ಮುಂದೆ ಅಟ್ಟಹಾಸ ಹಾಕುತ್ತಿರುವ ಈ ಮಸೂದೆಯನ್ನು ಅವರು ಅಂಗೀಕರಿಸಲೂಬಹುದು. ಆದರೆ ಪ್ರಜಾಪ್ರಭುತ್ವೀಯ ಶಕ್ತಿಗಳು ಪಾರ್ಲಿಮೆಂಟಿನೊಳಗೆ ನಡೆಸುವ ಆಂತರಿಕ ಹೋರಾಟ ಫಲಿಸದೇ ಹೋಗಬಹುದು. ಆದ್ದರಿಂದ ಇಡೀ ದೇಶದ ಜನಾಂಗವೇ ಯು. ಜಿ. ಸಿ. ವರದಿಯ ಜಾರಿಯ ವಿರುದ್ಧ ಪ್ರತಿಭಟಿಸಲೇ ಬೇಕು. ಅವರೆಲ್ಲರೂ ಅಧ್ಯಾಪಕರು, ವಿದ್ಯಾರ್ಥಿಗಳು, ಕಾರ್ಯಾಚಾರಿಗಳೂ ಹಾಗೂ ಬುದ್ಧಿ ಜೀವಿಗಳು ಚಳುವಳಿಯಲ್ಲಿ ಧುಮುಕಿ ಆಳುವ ವರ್ಗದ ಪಿತೂರಿಯನ್ನು ಸೋಲಿಸಿ ಬಯಲಿಗೆಳೆಯಬೇಕು.

ಈಗಾಗಲೇ ನವದೆಹಲಿಯ ಜವಹರಲಾಲ್ ವಿಶ್ವವಿದ್ಯಾಲಯ, ದೆಹಲಿ ಯುನಿವರ್ಸಿಟಿ, ಜಮೀಯಾ ಮಿಲ್ಲಾಯ್ ಇಸ್ಲಾಮಿಯಾದ ವಿದ್ಯಾರ್ಥಿಗಳು ಅಧ್ಯಾಪಕರು, ಕೆಲಸಗಾರರು ಯು ಜಿ.ಸಿ ಪ್ರಧಾನ ಕಛೇರಿಯೆದುರು ಫೆಬ್ರವರಿ 2, 84 ರಂದು ಬೃಹತ್ ಪ್ರದರ್ಶನ ನಡೆಸಿದರು. ಭಾರತ ವಿದ್ಯಾರ್ಥಿ ಫೆಡರೇಷನ್, ದೆಹಲಿ ರಾಜ್ಯ ಸಮಿತಿಯ ಕರೆಯ ಮೇರೆಗೆ ಎಲ್ಲಾ ವಿಭಾಗದ ವಿದ್ಯಾರ್ಥಿಗಳೂ ಸಾವಿರಾರು ಸಂಖ್ಯೆಯಲ್ಲಿ ಪ್ರದರ್ಶನ ನಡೆಸಿದರು. ಫೆಬ್ರವರಿ 29, ಮಾರ್ಚ್ 1 ರಂದು ಕೇಂದ್ರೀಯ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು, ಅಧ್ಯಾಪಕರು, ಕೆಲಸಗಾರರ ಸಮಾವೇಶ ನಡೆದು ಸಿ.ಯು.ಆರ್.ಸಿ. ವರದಿ ಜಾರಿಯಾಗದಂತೆ ಹೋರಾಡಬೇಕೆಂದು ನಿರ್ಧರಿಸಿದೆ. ಇದರಲ್ಲಿ ಜೆ.ಎನ್.ಯು. ಅಲಿಘರ್ ಮುಸ್ಲಿಂ ಯುನಿವರ್ಸಿಟಿ, ಬನಾರಸ್ ಹಿಂದೂ ಯುನಿವರ್ಸಿಟಿಯ ಹೈದರಾಬಾದ್ ಯುನಿವರ್ಸಿಟಿಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಎಸ್.ಎಫ್.ಪಿ ಕೇಂದ್ರ ಸಮಿತಿಯು ಅಖಿಲಭಾರತ ಮಟ್ಟದಲ್ಲಿ ಈ ವರದಿಯನ್ನು ಪ್ರತಿಭಟಿಸುವಂತೆ ಕರೆನೀಡಿದ್ದು ಬುದ್ಧಿ ಜೀವಿಗಳು, ಅಧ್ಯಾಪಕರು, ಗಣ್ಯ ವ್ಯಕ್ತಿಗಳ ಸಹಿಸಂಗ್ರಹಣೆಗೆ ಕಾರ್ಯ ಹಮ್ಮಿಕೊಂಡಿದೆ. ಕರಾಳ ಮಸೂದೆಯನ್ನು ಪ್ರತಿಭಟಿಸಲು ಈ ಕಾರ್ಯಕ್ರಮ ಯಶಸ್ವಿಗೊಳಿಸುವಲ್ಲಿ ಮುಂದಾಗಬೇಕಿದೆ. ಕರ್ನಾಟಕದಲ್ಲಿಯೂ ಈ ಚಳವಳಿ ತೀವ್ರಗೊಳ್ಳಬೇಕಿದೆ. ಎಸ್.ಎಫ್.ಐ. ರಾಜ್ಯ ಸಮಿತಿ ರಾಜ್ಯಪಾಲರೊಂದಿಗೆ ಈ ಕುರಿತು ಭೇಟಿಯಾಗಿ ಚರ್ಚಿಸಲಿದೆ.

ಯಾವುದೇ ಸಮಸ್ಯೆಗಳನ್ನು ಪರಿಹರಿಸಬೇಕೆಂದಿದ್ದರೆ ಜನತೆಯ ಮೂಲಭೂತ ಹಕ್ಕುಗಳ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡೇ ಕೂಲಂಕುಶ ಅಧ್ಯಯನ, ವಿಮರ್ಶೆಯಿಂದ ಕಾರ್ಯಕ್ರಮ ರೂಪಿಸಿ ಜಾರಿಗೊಳಿಸಬೇಕು. ಶೈಕ್ಷಣಿಕ ರಂಗದ ಸಮಸ್ಯೆಗಳು ಉಲ್ಬಣಗೊಂಡು ಅತಿಯಾಗುತ್ತಿವೆ ನಿಜ. ಇವುಗಳ ಉಗಮದ ಮೂಲ ಶೋಧಿಸಿ, ಪರಿಣಾಮಕಾರಿಯಾದ ಪರಿಹಾರೋಪಾಯಗಳನ್ನು ಜಾರಿಗೊಳಿಸಬೇಕು. ಆದರೆ ಇಂದಿನ ಆಳುವ ವರ್ಗದ ಕ್ರಮಗಳನ್ನು ನೋಡಿದರೆ "ನೆಗಡಿಯನ್ನು ಕಡೆಯುತ್ತೇವೆಂದು ಜನರ ಮೂಗುಗಳನ್ನು ಕತ್ತರಿಸುವ ಕ್ರಮದಂತೆ ಮೂರ್ಖತನದ ಪ್ರಯತ್ನವಾಗಿದೆ.

ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಲೇ, ಸರ್ವಾಧಿಕಾರೀ ಶಕ್ತಿಗಳ ಕುತಂತ್ರಗಳನ್ನು ಬಯಲಿಗೆಳೆಯುತ್ತಲೇ ಮುನ್ನಡೆಯುವ ಸಂಘಟಿತ ಹೋರಾಟದ ದಿಟ್ಟ ಹೆಜ್ಜೆಯೊಂದೇ ಪರಿಹಾರ ಮಾರ್ಗ, ಇದು ಸಾಧಿತವಾಗಬೇಕಾದರೆ ಎಲ್ಲಾ ಪ್ರಗತಿಪರ, ಪ್ರಜಾಸತ್ತಾತ್ಮಕ ಶಕ್ತಿಗಳ ಐಕ್ಯಹೋರಾಟ ಅತ್ಯಗತ್ಯ. ಈ ದೆಶೆಯಲ್ಲಿ ಎಸ್.ಎಫ್.ಐ. ಮುನ್ನಡೆ ಗಮನಾರ್ಹ.

ಹೊಸ ಸೂರ್ಯ

ದಿನಗಳೆಷ್ಟೋ ಉರುಳಿವೆ
ರಾತ್ರಿಗಳೆಷ್ಟೋ ಹಗಲುಗಳನ್ನು
ಹಡೆದಿವೆ
ಆದರೆ ಎಲ್ಲವೂ ನಿರರ್ಥಕ
ಕಾಣುವದೆಲ್ಲಾ ಕತ್ತಲೆ-ಕಲ್ಲಿಯ ತವಕ
ಈಗ ಎಲ್ಲೆಲ್ಲೂ
ಹೋರಾಟದ ಉಸಿರು
ಹೊರ ಹೊಮ್ಮಿದೆ
ತಲೆ ತಲಾಂತರದಿಂದ
ನೊಂದ ಜೀವಗಳು
ಕತ್ತಲಲ್ಲೇ ಅರಳಿ ನಿಂತಿವೆ
ಮುಳುಗಿ ಹೋದ ಸೂರ್ಯನನ್ನು
ಹೊತ್ತು ತರಲು
ಹುರುಪುಗೊಂಡಿವೆ
ನಾಳೆ ಅರಳುವ
ಮೊಗ್ಗುಗಳಿಗೆ
ಭರವಸೆಯ
ಮಾತು ಕೊಟ್ಟಿದೆ

— ಬಸವರಾಜ ಸಬರದ

("ಕನ್ನಡ ಪ್ರತಿಭಟನೆ ಕಾವ್ಯ" ಸಂಕಲನದಿಂದ)

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು | 10

— ಕಾ|| ಎಂ. ಬಸವಪುನ್ನಯ್ಯ

'ಮರಣಾಸನ್ನ ವ್ಯವಸ್ಥೆಯ ಪ್ರತಿಪಾದಕರ ಮಿಥ್ಯಾಪವಾದಗಳು ಚರಿತ್ರೆಯ ದಿಕ್ಕನ್ನೇನೂ ಬದಲಿಸಲಾರವು'

ಅರುಣ್ ಶೌರಿಯ ಆಪಾದನೆಗಳಿಗೆ ಸಿ. ಪಿ. ಐ. (ಎಂ) ನ ಪೊಲಿಟ್ ಬ್ಯೂರೋ ಸದಸ್ಯ ಕಾ. ಎಂ. ಬಸವಪುನ್ನಯ್ಯ ಅವರು ಬರೆದ ಲೇಖನಗಳ ಒಟ್ಟು ನಾಲ್ಕು ಭಾಗಗಳ ಕನ್ನಡ ಅನುವಾದದ ಪ್ರಕಟನೆ ಪ್ರಸ್ತುತ ಸಂಚಿಕೆಯೊಂದಿಗೆ ಮುಕ್ತಾಯಗೊಳ್ಳುತ್ತದೆ.

ಕಮ್ಯುನಿಸ್ಟರು ಸಾಮ್ರಾಜ್ಯಶಾಹಿಯೊಂದಿಗೆ ರಾಜಿ ಮಾಡಿಕೊಂಡರೋ ಅಥವಾ ಕಾಂಗ್ರೆಸ್ ಮತ್ತು ಲೀಗ್ ಮುಖಂಡರು ಭಾರತೀಯ ಜನತೆಯ ಸಾಮ್ರಾಜ್ಯಶಾಹೀ-ವಿರೋಧಿ ಭಾವನೆಗಳಿಗೆ ದ್ರೋಹ ಬಗೆದರೋ ಎಂಬುದು ಆಗಸ್ಟ್ 1942 ರಿಂದ ಆಗಸ್ಟ್ 1947 ರ ನಡುವಿನ ಅವಧಿಯ ಬೆಳವಣಿಗೆಗಳನ್ನು ಪ್ರಾಮಾಣಿಕವಾಗಿ ಅಧ್ಯಯನ ಮಾಡಿದವರಿಗೆ ಸ್ಪಷ್ಟವಾಗಿ ತಿಳಿಯುತ್ತದೆ.

1944 ರ ಮೇ 6 ರಂದು ಗಾಂಧಿಯನ್ನು ಅನಾರೋಗ್ಯದ ನಿಮಿತ್ತ ಬಿಡುಗಡೆ ಮಾಡಲಾಯಿತು. ತಕ್ಷಣವೇ ಅವರು 1942 ರ ಆಗಸ್ಟ್ 8 ರ ಠರಾವಿನ "ಮಾಡು ಇಲ್ಲವೆ ಮಡಿ" ಭಾಗ ತಂತಾನೇ ರದ್ದಾಯಿತೆಂದು ಘೋಷಿಸಿದರು. 1945 ರ ಜೂನ್ ವೇಳೆಗೆ ಸಂಪೂರ್ಣ ಕಾರ್ಯಕಾರೀ ಸಮಿತಿ ಬಿಡುಗಡೆ ಹೊಂದಿತು. 1945 ರ ಸಪ್ಟೆಂಬರ್ 21 ರಂದು ಕಾಂಗ್ರೆಸ್ ಪರವಾಗಿ ಜವಹರ್‌ಲಾಲ್ ನೆಹರೂ, ವಲ್ಲಭಭಾಯಿ ಪಟೇಲ್ ಮತ್ತು ಜಿ. ಬಿ. ಪಂತ್ ಸಹಿ ಹಾಕಿದ ಅಧಿಕೃತ ಹೇಳಿಕೆಯೊಂದು "ಯಾವುದೇ ಆಂದೋಲನವನ್ನು ಎ. ಐ. ಸಿ. ಸಿ. ಯಾಗಲೀ ಅಥವಾ ಗಾಂಧೀಜಿಯಾಗಲೀ ಅಧಿಕೃತವಾಗಿ ಆರಂಭಿಸಿರಲಿಲ್ಲ" ಎಂದು ಘೋಷಿಸಿತು. ಸಿಪಿಐ ವಿರೋಧಿಸಿದ ಈ ಆಂದೋಲನ್ ಅದೇ ತಾನೇ !

ಬೂರ್ಜ್ವಾ ನಿಜಸ್ವರೂಪ

1946 ರ ಬೆಳವಣಿಗೆಗಳನ್ನು ದಾಖಲು ಮಾಡಿಕೊಂಡ ಜಿ ಅಧಿಕಾರಿಯವರ "ಘಟನೆಗಳ ದಿನಚರಿ-1946" ರಿಂದ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡುತ್ತೇವೆ. ಬೂರ್ಜ್ವಾ ವರ್ಗದ ನಿಜಸ್ವರೂಪವನ್ನು ಮತ್ತು ಯಾವುದೇ ಸಾಮ್ರಾಜ್ಯಶಾಹೀ-ವಿರೋಧಿ ಸಮರಶೀಲ ಸಾಮೂಹಿಕ ಕಾರ್ಯಾಚರಣೆಗೆ ಅದರ ಬದ್ಧ ವೈಷಮ್ಯವನ್ನು ಬಿಚ್ಚಿ ತೋರುವ ಘಟನಾವಳಿಗಳ ಸೂಚನೆ ಇಲ್ಲಿ ಸಿಗುತ್ತದೆ.

"ಜನವರಿ 4 ರಂದು ಆಜಾದ್ ಹಿಂದ್ ಸೇನೆಯ ಮುಂದಾಳುಗಳು ಬಿಡುಗಡೆ ಹೊಂದಿದರು. ಜನವರಿ 9 ರಂದು ಗಾಂಧಿ ರಾಜಕೀಯದಲ್ಲಿ ಮತ್ತು ಮುಷ್ಕರಗಳಲ್ಲಿ ಭಾಗವಹಿಸಬಾರದೆಂದು ವಿದ್ಯಾರ್ಥಿಗಳಿಗೆ ಸಲಹೆಯಿತ್ತರು.

ಫೆಬ್ರವರಿ 19 ರಂದು ರಾಯಲ್ ಇಂಡಿಯನ್ ನೇವಿ [ರಿನ್] ಯ ನಾವಿಕರು ಮುಷ್ಕರ ನಡೆಸಿದರು.

ಫೆಬ್ರವರಿ 25 ರಂದು ರಾಯಲ್ ಇಂಡಿಯನ್ ಏರ್‌ಫೋರ್ಸ್ (ಮದ್ರಾಸ್) "ರಿನ್" ನಾವಿಕರಿಗೆ ಸಹಾನುಭೂತಿ ಪ್ರದರ್ಶಿಸಿ ಮುಷ್ಕರ ನಡೆಸಿತು.

ಫೆಬ್ರವರಿ 25 ರಂದು "ರಿನ್" ನಾವಿಕರಿಗೆ ಸಹಾನುಭೂತಿ ಪ್ರದರ್ಶಿಸಿ ತಿರುಚ್ಚಿಯಲ್ಲಿ ಮುಷ್ಕರ.

ಫೆಬ್ರವರಿ 26 ರಂದು ಸರದಾರ್ ಪಟೇಲ್ "ರಿನ್" ಮುಷ್ಕರ ಸರಿಯಾದುದ ಎಂದು ಘೋಷಿಸಿದರು.

ಅದೇ ದಿನ ಗಾಂಧಿ ಹೇಳುತ್ತಾರೆ— "ಬ್ರಿಟಿಶ್ ಪ್ರಾಮಾಣಿಕತೆಯಲ್ಲಿ ನಂಬಿಕೆಯಿಟ್ಟು ಬ್ಯಾರಿಕೇಡ್ ಬಿಟ್ಟು ಬನ್ನಿ"

ಫೆಬ್ರವರಿ 28 ರಂದು ಮಧುರಾದಲ್ಲಿ ರಿನ್ ಮುಷ್ಕರಕ್ಕೆ ಸಹಾನುಭೂತಿ ತೋರಿಸಲು ಸಂಪೂರ್ಣ ಹರತಾಳ ನಡೆಯಿತು.

1946 ರ ಮಾರ್ಚ್ 1 ಜಬ್ಬಲಪುರ ಸಿಪಾಯಿಗಳ ಮುಷ್ಕರ ಆರಂಭ ಮಾರ್ಚ್ 4 ರಂದು "ಕಾಂಗ್ರೆಸ್ ಪ್ರತಿಷ್ಠೆಗೆ ರಿನ್ ಮುಷ್ಕರದಿಂದ ಕುಂದಾಯಿತು" ಎಂದು ಸರದಾರ್ ಪಟೇಲ್ ಮತ್ತೆ ಗೋಳಾಡುತ್ತಾರೆ.

ಮಾರ್ಚ್ 15 ರಂದು ಮುಳುಂದ್ ಕ್ಯಾಂಪ್‌ನಲ್ಲಿದ್ದ ರಿನ್ ಬಂಧಿಗಳ ಉಪವಾಸ ಮುಷ್ಕರ.

18 ರಂದು ಡೆಹರಾಡೂನ್‌ನಲ್ಲಿ ಘೂರ್ಖಾ ಸೈನಿಕರ ಬಂಡಾಯ. 19 ರಂದು ಅಲಹಾಬಾದ್‌ನಲ್ಲಿ ಪೋಲೀಸರ ಉಪವಾಸ ಮುಷ್ಕರ ಆರಂಭ. ಮತ್ತು ಮಾರ್ಚ್ 22 ರಂದು ವೇತನ ಹೆಚ್ಚಳಕ್ಕಾಗಿ ದಿಲ್ಲಿ ಪೋಲೀಸರ ಉಪವಾಸ ಮುಷ್ಕರ ಆರಂಭ.

ಏಪ್ರಿಲ್ 3 ರಂದು ವೇತನ ಹೆಚ್ಚಳಕ್ಕಾಗಿ ಹತ್ತು ಸಾವಿರ ಬಿಹಾರ್ ಪೋಲೀಸರ ಮುಷ್ಕರ.

ಮೇ 2 ರಂದು ಈಶಾನ್ಯ ರೈಲ್ವೇ ಕಾರ್ಮಿಕರ ನಾಲ್ಕು ಗಂಟೆಗಳ ಮುಷ್ಕರದ ಆಚರಣೆ.

1946 ರ ಜೂನ್ 6 ರಂದು ಮುಂಬೈನ ಕಾಂಗ್ರೆಸ್ ಮಂತ್ರಿಮಂಡಲ ರಿನ್ ಗೋಳೀಬಾರಿನ ಬಗ್ಗೆ ತನಿಖೆ ನಡೆಸಲು ನಿರಾಕರಿಸುತ್ತದೆ. ಜುಲೈ 11 ರಂದು ಒಂದು ಲಕ್ಷ ಅಂಚೆ ಕಾರ್ಮಿಕರ ಅಖಿಲ-ಭಾರತ ಮುಷ್ಕರ. ಜುಲೈ 23 ರಂದು ಅಂಚೆ ಕಾರ್ಮಿಕರಿಗೆ ಬೆಂಬಲವಾಗಿ 4 ಲಕ್ಷ ಕೈಗಾರಿಕಾ ಕಾರ್ಮಿಕರ ಮುಷ್ಕರ."

ಜನತೆಯ ಈ ಎಲ್ಲಾ ದಂಗೆಗಳಿಂದ ಕಾಂಗ್ರೆಸ್ ಮತ್ತು ಲೀಗ್ ಮುಖಂಡತ್ವ ಭಯಭೀತಗೊಂಡಿದ್ದವು. ಈ ದಂಗೆಗಳ ಅತ್ಯುಚ್ಚ ಶಿಖರ ಎಂದರೆ ಯೂನಿಯನ್ ಜಾಕ್‌ನ್ನು ಇಳಿಸಿ ಕಾಂಗ್ರೆಸ್, ಮುಸ್ಲಿಂ ಲೀಗ್ ಬಾವುಟಗಳು ಮತ್ತು ಕೆಂಬಾವುಟ ಈ ಮೂರು ಬಾವುಟಗಳನ್ನು ಹಾರಿಸಿದ ರಾಯಲ್ ಇಂಡಿಯನ್ ನ್ಯೇವಿಯ ನಾವಿಕರ ಬಂಡಾಯ

ಅತ್ಯಂತ ದೊಡ್ಡ ವಿಶ್ವಾಸ ದ್ರೋಹ

ಮುಂಬೈಯ ಕಾರ್ಮಿಕ ಸಂಘಗಳು ಮತ್ತು ಕಮ್ಯುನಿಸ್ಟ್ ಪಕ್ಷ ಮುಷ್ಕರ ಮತ್ತು ಹರತಾಳಕ್ಕಾಗಿ ರಿನ್ ಮುಷ್ಕರ ಸಮಿತಿ ನೀಡಿದ್ದ ಕರೆಯನ್ನು ಬೆಂಬಲಿಸಿ ಮುಂಬೈಯಲ್ಲಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿ, ಆ ಅಮಾನುಷ ಪೋಲೀಸ್ ಗೋಳೀಬಾರನ್ನು ಎದುರಿಸಿದ್ದರೆ, ಅತ್ತ ಕಾಂಗ್ರೆಸ್‌ನ ಅಧ್ಯಕ್ಷ ಮೌಲಾನಾ ಆಜಾದ್ "ಮುಷ್ಕರಗಳು, ಹರತಾಳಗಳು ಮತ್ತು ಆಯಾ ದಿನದ ತಾತ್ಕಾಲಿಕ ಅಧಿಕಾರಿಗಳಿಗೆ ಅವಿಧೇಯತೆ ಇಲ್ಲಿ ತರವಲ್ಲ" ಎಂದು ಘೋಷಿಸಿದರು. ಜನತೆಯ ನಡುವಿನ ಪ್ರಕ್ಷೋಭೆಯಿಂದಲೇ ಕಾಂಗ್ರೆಸ್-ಲೀಗ್‌ನ ತಾತ್ಕಾಲಿಕ ಸರಕಾರ ಹುಟ್ಟಿ ಬಂದು. ಈ ಸರಕಾರವೇ ದೇಶದ ಐಕ್ಯತೆಯನ್ನು ಉಳಿಸಲು ಒಂದು ಆಂತರಿಕ ಯುದ್ಧಕ್ಕೂ ಸಿದ್ಧ ಎಂಬ ಧೀರ ಉದ್ಗಾರಗಳನ್ನೆಲ್ಲಾ ತಣ್ಣಗೆ ಮರೆತು ದೇಶದ ಕೋಮುವಾರು ವಿಭಜನೆಯ ಬ್ರಿಟಿಶ್ ಯೋಜನೆಯನ್ನು ಸ್ವೀಕರಿಸಿದ್ದು. ಇದೊಂದು ಆರೋಹಣ-ಭಂಗ [Anti Climax] ಅಲ್ಲವೇ ?

ಯಾರಾದರೂ "ವಿಶ್ವಾಸ ದ್ರೋಹ"ದ ಬಗ್ಗೆ ಮಾತಾಡಲೇ ಬೇಕೆಂದಾದರೆ, ಅತ್ಯಂತ ದೊಡ್ಡ ವಿಶ್ವಾಸದ್ರೋಹ ತನ್ನನ್ನು ರೂಪಿಸಿಕೊಂಡ ಬಗೆಯಿದು. ಇದರ ಮುಖ್ಯ ಶಿಲ್ಪಿಗಳೆಂದರೆ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನ ಮುಖಂಡರು. 1942 ರ ಹೋರಾಟ ವಾಸ್ತವವಾಗಿ ಕ್ರಮೇಣ ತಣ್ಣಗಾಗಿ ಭಾರತೀಯ ಜನಸಾಮಾನ್ಯರನ್ನು ತಮ್ಮ ಅಧೀನವಿರಿಸಿಕೊಂಡಿದ್ದ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗಿನ ಮುಖಂಡರುಗಳು ರಾಜಕೀಯ ಅಧಿಕಾರ ಗಳಿಸುವುದಕ್ಕಾಗಿ 1943 ರ ಆಗಸ್ಟ್‌ನಿಂದ ಹೆಚ್ಚುತ್ತಿದ್ದ ಸಾಮ್ರಾಜ್ಯಶಾಹೀ-ವಿರೋಧೀ ಪ್ರಕ್ಷೋಭೆಗಳನ್ನು ತಡೆದು ರಾಜಿಮಾಡಿಕೊಳ್ಳಲಾರಂಭಿಸಿದರು; 1947 ರಲ್ಲಿ ಭಾರತೀಯ ಐಕ್ಯತೆಯ ಭಗ್ನಾವಶೇಷಗಳ ಮೇಲೆ, ಕೋಮು ದಂಗೆಗಳಿಗೆ ಆಹುತಿಯಾದ ಲಕ್ಷಗಟ್ಟಲೆ ಜನರ ಗೋರಿಗಳ ಮೇಲೆ ರಾಜಕೀಯ ಅಧಿಕಾರ ಪಡೆದರು.

1946 ರ ಆಗಸ್ಟ್‌ನಲ್ಲಿ ಕಾಂಗ್ರೆಸ್-ಲೀಗ್ ತಾತ್ಕಾಲಿಕ ಸರಕಾರ ಕಾರ್ಯಾರಂಭ ಮಾಡಿದ ತಕ್ಷಣ ಈ ಎರಡು ಪಕ್ಷಗಳ ಬೂರ್ಜ್ವಾ-ಭೂ ಮಾಲಕ ವರ್ಗಗಳ ಮುಖಂಡರು ಯುದ್ಧ ನಂತರ ಬ್ರಿಟಿಶ್ ರಾಜ್ಯಭಾರದ ವಿರುದ್ಧ ಜನತೆಯ ಪ್ರಕ್ಷೋಭೆಗಳಿಗೆ, ಪೋಲೀಸ್ ಮತ್ತು ಸೈನಿಕ ಬಂಡಾಯಗಳಿಗೆ ಬ್ರಿಟಿಶರೊಡನೆ ತಮ್ಮ ವ್ಯವಹಾರಗಳನ್ನು ಸುಗಮಗೊಳಿಸುವುದಕ್ಕಾಗಿ ವಿಶ್ವಾಸದ್ರೋಹ ಬಗೆದರು. ಮಾತ್ರವಲ್ಲ, ಪ್ರತಿಯೊಂದು ಸಾಮ್ರಾಜ್ಯಶಾಹೀ-ವಿರೋಧೀ ಹೋರಾಟವನ್ನೂ ಸಕ್ರಿಯವಾಗಿ ವಿರೋಧಿಸಿದರು. ಇಲ್ಲಿ ಕೂಡಾ ಅವರ ವಿರೋಧದ ಅಲಗು ಕಮ್ಯೂನಿಸ್ಟರತ್ತಲೇ ಇತ್ತು. ಯಾಕೆಂದರೆ ಕಮ್ಯುನಿಸ್ಟರು ಯುದ್ಧನಂತರದ ಈ ಉತ್ಕ್ರಾಂತಿಗಳನ್ನು ದೃಢವಾಗಿ ಬೆಂಬಲಿಸುತ್ತಿದ್ದರು, ಬ್ರಿಟಿಶ್ ಆಳ್ವಿಕೆಯನ್ನು ಯಶಸ್ವಿಯಾಗಿ ಅಂತ್ಯಗೊಳಿಸಬೇಕೆಂದು ಒತ್ತಾಯಿಸುತ್ತಿದ್ದರು ಮತ್ತು ಬ್ರಿಟಿಶ್ ಆಳ್ವಿಕೆಯನ್ನು ಶಾಶ್ವತಗೊಳಿಸುವ ಊರುಗೋಲುಗಳಂತೆ ವರ್ತಿಸುತ್ತಿದ್ದ ಸ್ಥಳೀಯ ರಾಜರುಗಳ ಮತ್ತು ಊಳಿಗಮಾನ್ಯ ಭೂ ಮಾಲಕರ ಸಾಮಾಜಿಕ ಪ್ರಾಬಲ್ಯವನ್ನು ಕೊನೆಗೊಳಿಸಬೇಕೆಂದು ಒತ್ತಾಯಿಸುತ್ತಿದ್ದರು.

ದ್ರೋಹದ ಒಂದು ಉದಾಹರಣೆ

ಹೈದರಾಬಾದ್ ನಿಜಾಮನ ಉದಾಹರಣೆಯನ್ನೇ ತಗೊಳ್ಳಿ. ಈತ ಹೈದರಾಬಾದ್‌ನ ಊಳಿಗಮಾನ್ಯ ಪ್ರಭುತ್ವಕ್ಕೆ ಸ್ವತಂತ್ರ ಸ್ಥಾನಮಾನ ಬೇಕೆಂದು ಚೌಕಾಸಿ ಮಾಡುತ್ತಿದ್ದ ಮತ್ತು ಅದಾಗಲೇ ಬ್ರಿಟಿಶ್ ಮತ್ತು ಪಾಕಿಸ್ತಾನೀ ಆಡಳಿತಗಾರರೊಂದಿಗೆ ಮಾತುಕತೆ ಆರಂಭಿಸಿದ್ದ. ಇಂತಹ ದುಷ್ಟ ಯೋಜನೆಗಳನ್ನು ಮಧ್ಯದಲ್ಲೇ ನಿಷ್ಪ್ರಯೋಜಕಗೊಳಿಸಲು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸುಮಾರಾಗಿ ಪರಿಣಾಮಕಾರಿಯಾದ ಯಾವುದೇ ಪ್ರಯತ್ನವನ್ನೂ ನಡೆಸಲಿಲ್ಲ. ಹೈದರಾಬಾದ್ ಪ್ರಾಂತದ ಕಮ್ಯುನಿಸ್ಟ್ ಪಕ್ಷ ಮತ್ತು ಆಂಧ್ರ ಮಹಾಸಭಾ ಹೈದರಾಬಾದಿನ ಊಳಿಗಮಾನ್ಯ ಸಂರಚನೆಯನ್ನು ಧ್ವಂಸಗೊಳಿಸುವುದಕ್ಕಾಗಿ ಒಂದು ಜನಪ್ರಿಯ ಬಂಡಾಯವನ್ನು ಆರಂಭಿಸಿದವು. ನಿಜಾಮನ ಪೋಲೀಸ್ ಮತ್ತು ಸೈನ್ಯದ ಸಶಸ್ತ್ರ ದಾಳಿಗಳನ್ನು ಎದುರಿಸಲು 1946 ರ ಜುಲೈಯಲ್ಲಿ ಸಶಸ್ತ್ರ ಪ್ರತಿರೋಧ ಆರಂಭವಾಯಿತು. ಹಳ್ಳಿಗಳ ಮೇಲೆ ದಾಳಿ ನಡೆಸಿ, ಆಸ್ತಿಪಾಸ್ತಿಗಳನ್ನು ಲೂಟಿ ಮಾಡುತ್ತಿದ್ದ, ಮಹಿಳೆಯರ ಮೇಲೆ ಅತ್ಯಾಚಾರ ನಡೆಸುತ್ತಿದ್ದ ಮತ್ತು ಮನೆಗಳನ್ನು ಸುಟ್ಟು ಹಾಕುತ್ತಿದ್ದ ರಜಾಕಾರರ ಅಂದರೆ ನಿಜಾಮನ ಖಾಸಗೀ ಸಶಸ್ತ್ರ ತುಕಡಿಗಳ ಕೋಪವನ್ನು ತೆಲಂಗಾಣದ ಹೋರಾಟನಿರತ ರೈತರು ಎದುರಿಸಬೇಕಾಗಿ ಬಂತು. ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರಕಾರ ಭಾರತೀಯ ರೈತಾಪಿ ವರ್ಗದ ಈ ಧೀರ ಹೋರಾಟದ ಮೂಕ ಪ್ರೇಕ್ಷಕನಾಗಿ ಉಳಿಯಿತು.

ಗಾಂಧಿ ಭಾರತೀಯ ರಾಜರುಗಳ ಬಗ್ಗೆ ಎತ್ತಿರುವ ಉದ್ಗಾರಗಳನ್ನು ಕಾಂಗ್ರೆಸ್ಸಿಗರ ಆಚರಣೆಯೊಂದಿಗೆ ಹೋಲಿಸಿದಾಗ ಪರಿಸ್ಥಿತಿಯು ವಿಡಂಬನೆ

ಇನ್ನಷ್ಟು ಹೆಚ್ಚಾಗುತ್ತದೆ. ಯಾಕೆಂದರೆ 1939 ರ ಅಕ್ಟೋಬರ್ 7 ರ "ಹರಿಜನ್" ನಲ್ಲಿ ಗಾಂಧಿ ಬರೆದಿದ್ದರು.... ಪ್ರತಿಯೊಬ್ಬ ಭಾರತೀಯ ರಾಜ ಮಹಾರಾಜನೂ ತನ್ನ ಸ್ವಂತ ರಾಜ್ಯದಲ್ಲಿ ಒಬ್ಬ ಹಿಟ್ಲರ್. ಯಾವುದೇ ಕಾನೂನಿಗೆ ಒಳಪಡದೆ ಆತ ತನ್ನ ಜನರನ್ನು ಕೊಲ್ಲಬಹುದು. ಹಿಟ್ಲರ್‌ನಿಗೆ ಇದಕ್ಕಿಂತ ಹೆಚ್ಚಿನ ಅಧಿಕಾರವೇನೂ ಇರಲಿಲ್ಲ. ನನಗೆ ತಿಳಿದಂತೆ ಜರ್ಮನ್ ಸಂವಿಧಾನ ಕೂಡಾ ಫ್ಯೂರರ್‌ನ ಮೇಲೆ ಕೆಲವು ಮಿತಿ ಹೇರಿದೆ."

ಸ್ವಾತಂತ್ರ್ಯ ನಂತರ ಕೂಡಾ ಎರಡು ವರ್ಷಗಳವರೆಗೆ ಕಾಂಗ್ರೆಸ್ ಸರಕಾರ ನಿಜಾಮನೊಂದಿಗೆ ತೆರೆಮರೆಯಲ್ಲಿ ವ್ಯವಹಾರ ಕುದುರಿಸಿಕೊಳ್ಳಲು ಪ್ರಯತ್ನಿಸುವುದನ್ನು ಬಿಟ್ಟು ಬೇರೇನನ್ನೂ ಮಾಡಲಿಲ್ಲ. ಕಮ್ಯೂನಿಸ್ಟರು ಮತ್ತು ಆಂಧ್ರ ಮಹಾ ಸಭಾ ನಿಜಾಮನ ಪೋಲೀಸ್, ಸೈನ್ಯ ಮತ್ತು ಆತನ ಸಶಸ್ತ್ರ ಮಂದೆಗಳ ಸಶಸ್ತ್ರಧಾಳಿಗಳನ್ನು ಎದುರಿಸಿದರು ಮಾತ್ರವಲ್ಲ ಅವರನ್ನು ಮೂವತ್ತು ಲಕ್ಷಕ್ಕೂ ಹೆಚ್ಚು ಜನರು ವಾಸಿಸುತ್ತಿದ್ದ ಸುಮಾರು ಮೂರು ಸಾವಿರ ಹಳ್ಳಿಗಳಿಂದ ಹೊರಗೆ ಅಟ್ಟಿಯೇ ಬಿಟ್ಟಿದ್ದರು.

ಪಾಳೇಗಾರರ ವಿಮೋಚನೆ!

ಆ ಮೇಲೇನೇ 1948 ರ ಸೆಪ್ಟಂಬರ್ 13 ರಂದು ತಥಾಕಥಿತ "ಪೋಲೀಸ್ ಕಾರ್ಯಾಚರಣೆ" ಮತ್ತು ನಿಜಾಮ್ ನವಾಬನ ಪಾಳೆಯಗಾರೀ ನೊಗದಿಂದ ಹೈದರಾಬಾದಿನ ಜನತೆಯ "ವಿಮೋಚನೆ" ನಡೆಯಿತು. ಹೊರಗಿನಿಂದ ನೋಡಲು ಪೋಲೀಸ್ ಕಾರ್ಯಾಚರಣೆ ಒಂದು ವಿಮೋಚನಾ ಕಾರ್ಯಾಚರಣೆಯಾಗಿತ್ತು. ಮತ್ತು ನಿಜಾಮ ಹಾಗೂ ಆತನ ಸಶಸ್ತ್ರ ಪಡೆಗಳು ಮೂರು ದಿನಗಳಲ್ಲಿ ಶರಣಾಗತವಾದವು. ಆದರೆ ವಾಸ್ತವವಾಗಿ ಅದು ತೆಲಂಗಾಣಾದ ರೈತ ಹೋರಾಟಗಾರರ "ಮುತ್ತಿಗೆ" ಯಿಂದ ಜಾಗೀರದಾರರ, ಜಮೀಂದಾರರ, ದೇಶಮುಖರ ಮತ್ತು ನವಾಬನ ಇತರೆಲ್ಲಾ ಪಾಳೆಯಗಾರರ ವಿಮೋಚನೆಯಾಗಿತ್ತು.

ಜಮೀನುಗಳು ದೇಶಮುಖರು, ಜಾಗೀರದಾರರು ಮತ್ತು ಭೂ ಮಾಲಕರದ್ದು; ಅವನ್ನು ಅವುಗಳ "ಹಕ್ಕುದಾರ ಒಡೆಯರು"ಗಳಿಗೆ ಒಪ್ಪಿಸಬೇಕೆಂದು ಸರಕಾರದ ಸೈನಿಕ ವಿಮಾನಗಳು ಹಂಚಿದ ಕರಪತ್ರಗಳು ಸಾರಿದವು. ಜುಲೈ 1946 ರಿಂದ ಸೆಪ್ಟೆಂಬರ್ 1948 ರ ವರೆಗಿನ ಹೋರಾಟದ ಅವಧಿಯಲ್ಲಿ ಸಿಪಿಐ ಮತ್ತು ಆಂಧ್ರ ಮಹಾಸಭಾದ ನೇತೃತ್ವದಲ್ಲಿ ತೆಲಂಗಾಣಾದ ಬಂಡಾಯಗಾರ ರೈತರು ಸುಮಾರು ಹತ್ತು ಲಕ್ಷ ಎಕರೆ ಜಮೀನನ್ನು ಭೂಮಾಲಕರ ಕಾನೂನು ಬಾಹಿರ ಹಿಡಿತದಿಂದ ಕಸಿದುಕೊಂಡು ಪುನರ್ವಿತರಣೆ ಮಾಡಿದ್ದರು; ನಾಲ್ಕು ಜಿಲ್ಲೆಗಳ ಸುಮಾರು 16 ಸಾವಿರ ಚದರ ಮೈಲು ವಿಸ್ತೀರ್ಣದಲ್ಲಿ ಸುಮಾರು ಮೂರು ಸಾವಿರ ಹಳ್ಳಿಗಳಲ್ಲಿ ಜನತೆಯ ಆಡಳಿತ ಸ್ಥಾಪಿಸಿದ್ದರು. ತೆಲಂಗಾಣಾ ಕ್ಷೈತ್ರಿತಾಪಿ ವರ್ಗದ ಈ ನಿಜಾಮ-ವಿರೋಧೀ ಹೋರಾಟದಲ್ಲಿ ಸುಮಾರು ಐವತ್ತು ಸಾವಿರ ಜನ ಪೋಲೀಸ್ ಕ್ಯಾಂಪ್‌ಗಳಲ್ಲಿ ಚಿತ್ರಹಿಂಸೆ ಅನುಭವಿಸಿದರು, ಹತ್ತು ಸಾವಿರ ಜನ ಮೂರರಿಂದ ಹತ್ತು ವರ್ಷಗಳ ವರೆಗೆ ಜೈಲಿನಲ್ಲಿ ಬಂಧನದಲ್ಲಿದ್ದರು, ಸಾವಿರಾರು ಹೆಂಗಸರು ಅತ್ಯಾಚಾರಕ್ಕೊಳಗಾದರು ಮತ್ತು ರೈತರ ಕೋಟಿಗಟ್ಟಲೆ ಬೆಲೆಯ ಆಸ್ತಿ-ಪಾಸ್ತಿಗಳು ಲೂಟಿಯಾದವು. 1946-48 ರ ಅವಧಿಯಲ್ಲಿ ನವಾಬನ ಸೈನ್ಯಗಳು ಇದನ್ನು ನಡೆಸಿದರೆ, ತದನಂತರ ಕಾಂಗ್ರೆಸ್ ಸರಕಾರದ ಸೈನಿಕರು ನಡೆಸಿದರು.

ಹೈದರಾಬಾದಿನ ಸೆಪ್ಟೆಂಬರ್ 1948 ರ ಕಾರ್ಯಾಚರಣೆಯ ವೇಳೆಗೆ ಕಾಂಗ್ರೆಸ್ಸಿನ ಜನವಿರೋಧಿ ಮುಖ ಬಯಲಾಗಿ ಬಿಟ್ಟಿತ್ತು. ಅದು ನಿಜಾಮ್ ಮತ್ತು ಆತನ ಊಳಿಗಮಾನ್ಯ ಜಾಗೀರದಾರರು ಮತ್ತು ದೇಶಮುಖರ ರಕ್ಷಣೆಗೆ ನಿಂತಿತ್ತು. ಇತ್ತ ಸಿಪಿಐ ಕೃಷಿಕ್ರಾಂತಿಯ ಮುಂಚೂಣಿಯಲ್ಲಿ ನಿಂತು ಕಾಂಗ್ರೆಸ್ ಸರಕಾರದ ಕ್ರೂರ ದಮನಕ್ಕೊಳಗಾಗಿತ್ತು.

ಶೌರಿಯಂತಹವರು ಪರಿಶೀಲಿಸ ಬೇಕಾಗಿದೆ

ತೆಲಂಗಾಣಾ ರೈತಾಪಿ ವರ್ಗ ಸಿಪಿಐ ನೇತೃತ್ವದಲ್ಲಿ ನವಾಬನ ನಿರಂಕುಶ ಆಳ್ವಿಕೆಯ ವಿರುದ್ಧ ಹೋರಾಡುತ್ತಿದ್ದಾಗ, ಕಾಂಗ್ರೆಸ್ ನಾಯಕತ್ವ, ಅಧಿಕಾರದಲ್ಲಿದ್ದುಕೊಂಡು ಒಂದು ನಾಚಿಕೆಗೇಡಿನ ವ್ಯವಹಾರ ಕುದುರಿಸಿಕೊಂಡಿತು; ಆತನನ್ನು ರಾಜ ಪ್ರಮುಖನನ್ನಾಗಿ ಸ್ವೀಕರಿಸಿ ಹೈದರಾಬಾದ್ ರಾಜ್ಯವನ್ನು ಹಾಗೆಯೇ ಮುಂದುವರಿಸಲಾಗುವುದೆಂದು ಆತನಿಗೆ ಭರವಸೆ ನೀಡಿ ಈ ಮೂಲಕ ಬಹುಭಾಷಾ ಹೈದರಾಬಾದ್ ರಾಜ್ಯದ ತೆಲುಗು, ಕನ್ನಡ ಹಾಗೂ ಮರಾಠೀ ಜನತೆಗೆ ನೆರೆಯ ತಮ್ಮ ಭಾಷಾ ಬಾಂಧವರೊಡನೆ ಸೇರಿಕೊಳ್ಳುವ ಅವರ ಕಾನೂನುಬದ್ಧ ಹಕ್ಕನ್ನು ನಿರಾಕರಿಸಿತು.

ಐವತ್ತು ಸಾವಿರ ಸಶಸ್ತ್ರ ಸಿಬ್ಬಂದಿಯನ್ನು ಬಳಸಿ, ಕಮ್ಯೂನಿಸ್ಟರು ಮತ್ತು ಅವರನ್ನು ಅನುಸರಿಸಿದ ರೈತ ಜನತೆಯ ಮೇಲೆ ಮರಣಾಂತಿಕ ಹಲ್ಲೆಗಳನ್ನು ನಡೆಸಿ ಪೂರ್ಣ ಮೂರು ವರ್ಷಗಳ ಕಾಲ- ಅಂದರೆ 1948 ರ ಸೆಪ್ಟಂಬರ್‌ನಿಂದ 1951 ರ ಅಕ್ಟೋಬರ್‌ರವರೆಗೆ- ಕಾಂಗ್ರೆಸ್ "ದೇಶಭಕ್ತರು" ತೆಲಂಗಾಣಾ ಮತ್ತು ಆಂಧ್ರದಲ್ಲಿ ಮಾತ್ರವಲ್ಲ, ಸಮಸ್ತ ದೇಶದಲ್ಲಿ ಕಮ್ಯುನಿಸ್ಟರನ್ನು ಮತ್ತು ಹಕ್ಕುಗಳ ರಕ್ಷಣೆಗಾಗಿ ನಡೆಸುತ್ತಿದ್ದ ರೈತ ಕಾರ್ಯಾಚರಣೆಗಳನ್ನು ಧ್ವಂಸ ಮಾಡಲು ವ್ಯವಸ್ಥಿತವಾಗಿ ಕೆಲಸ ಮಾಡಿದರು. "ಸಶಸ್ತ್ರ ಕಾದಾಟ" ಗಳಲ್ಲಿ ಸತ್ತರು ಎಂಬ ನೆಪ ಹೂಡಿ ನೂರಾರು ಕಮ್ಯುನಿಸ್ಟ್ ಕಾರ್ಯಕರ್ತರನ್ನು ಕೊಂದು ಬಿಟ್ಟರೆ ತಮಗೆ ಸಿಪಿಐ ನಲ್ಲಿ ಸಮರ್ಥ ಕಾರ್ಯಕರ್ತರು ಇಲ್ಲದಂತೆ ಮಾಡಲು ಸಾಧ್ಯವಾಗಬಹುದು ಮತ್ತು ಆ ಮೂಲಕ 1952 ರ ಸಾರ್ವತ್ರಿಕ ಚುನಾವಣೆಗಳನ್ನು ಪ್ರತಿಸಮಾಲಿಲ್ಲದೇ ಪೂರ್ಣವಾಗಿ ಗೆದ್ದುಕೊಳ್ಳಬಹುದು ಎಂದೂ ಅವರು ಯೋಚಿಸಿದರು.

ಎರಡು ಪರಸ್ಪರ ವಿರೋಧೀ ದೃಷ್ಟಿಕೋನಗಳು, ಒಂದು ಬೂರ್ಜ್ವಾ-ಭೂ ಮಾಲಕ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಕಾಂಗ್ರೆಸ್ಸಿನ ದೃಷ್ಟಿಕೋನ ಮತ್ತು ಇನ್ನೊಂದು ಕಾರ್ಮಿಕ ವರ್ಗ ಮತ್ತು ಇತರ ಶ್ರಮಿಕ ಜನತೆಯನ್ನು ಪ್ರತಿನಿಧಿಸುವ ಕಮ್ಯುನಿಸ್ಟರ ದೃಷ್ಟಿಕೋನ-ಇವು ಸದಾ ಪರಸ್ಪರರ ವಿರುದ್ಧ ವೈಷಮ್ಯ ಹೊಂದಿದ್ದವು ಎನ್ನುವುದನ್ನು ಈಗಾಗಲೇ ದೀರ್ಘವಾಗಿ ವಾದಿಸಿದ್ದೇನೆ. ಕಾಂಗ್ರೆಸ್ಸು ಕಮ್ಯುನಿಸ್ಟರನ್ನು ರಾಜಕೀಯವಾಗಿ ಧ್ವಂಸಗೊಳಿಸಲು ಪ್ರಯತ್ನಿಸುತ್ತಲೇ ಇತ್ತು. ಮತ್ತು ಕಮ್ಯುನಿಸ್ಟರು ವಿಶಾಲ ಭಾರತೀಯ ಜನಸ್ತೋಮದ ಮೇಲೆ ಕಾಂಗ್ರೆಸ್ ಹೊಂದಿರುವ ಭದ್ರ ಹತೋಟಿಯನ್ನು ತಪ್ಪಿಸಲು ಪ್ರಯತ್ನಿಸುತ್ತಿತ್ತು. ಇಂತಹ ಪ್ರಯತ್ನಗಳ ಆಯವ್ಯಯ ತಖ್ತೆಯನ್ನು ಪರಿಶೀಲಿಸುವುದರಿಂದ ಶೌರಿಯ ಮಾದರಿಯ "ಸಂಶೋಧಕ"ರಿಗೆ ಒಳ್ಳೆಯದಾಗಬಹುದು.

> ಕಾಂಗ್ರೆಸ್ಸು ಕಮ್ಯುನಿಸ್ಟರನ್ನು ರಾಜಕೀಯವಾಗಿ ಧ್ವಂಸಗೊಳಿಸಲು ಪ್ರಯತ್ನಿಸುತ್ತಲೇ ಇತ್ತು ಮತ್ತು ಕಮ್ಯುನಿಸ್ಟರು ವಿಶಾಲ ಭಾರತೀಯ ಜನಸ್ತೋಮದ ಮೇಲೆ ಕಾಂಗ್ರೆಸ್ ಹೊಂದಿರುವ ಭದ್ರ ಹತೋಟಿಯನ್ನು ತಪ್ಪಿಸಲು ಪ್ರಯತ್ನಿಸುತ್ತಿತ್ತು. ಇಂತಹ ಪ್ರಯತ್ನಗಳ ಆಯವ್ಯಯ ತಖ್ತೆಯನ್ನು ಪರಿಶೀಲಿಸುವುದರಿಂದ ಶೌರಿಯ ಮಾದರಿಯ "ಸಂಶೋಧಕ"ರಿಗೆ ಒಳ್ಳೆಯದಾಗಬಹುದು.

ಅಪಪ್ರಚಾರದ ಫಲ

1942-45 ರ ಅವಧಿಯಲ್ಲಿ ಕಮ್ಯುನಿಸ್ಟರ ಮೇಲೆ ದ್ವೇಷದಿಂದ "ಮಾಸ್ಕೋದ ದಳ್ಳಾಳಿಗಳು", "ಸಾಮ್ರಾಜ್ಯಶಾಹಿಯ ದಳ್ಳಾಳಿಗಳು" ಮತ್ತು "ಮುಸ್ಲಿಂ ಲೀಗ್‌ನ ದಳ್ಳಾಳಿಗಳು" ಎಂಬ ಮಿಥ್ಯಾಪವಾದ ಹೊರಿಸಲಾಯಿತು. ಆದರೂ ಅವರು 1939-42 ಮತ್ತು 1945-47 ರ ಅವಧಿಯಲ್ಲಿ ದೇಶದಲ್ಲಿ ನಡೆದ ಸಾಮ್ರಾಜ್ಯಶಾಹೀ-ವಿರೋಧೀ ಸಮರಶೀಲ ಹೋರಾಟಗಳಲ್ಲಿ ಅಗ್ರಗಣ್ಯರಾಗಿ ನಿಂತರು. ಈ ಅವಧಿಯಲ್ಲಿ ಜನಸಾಮಾನ್ಯರು ಸಾಮ್ರಾಜ್ಯಶಾಹಿಗೆ ಬಲವಾದ ಹೊಡೆತ ನೀಡುವಾಗ ಕಮ್ಯುನಿಸ್ಟ್ ಆಂದೋಲನವನ್ನು ಹಿಂಬಾಲಿಸಿದರೆ, ಆಗ ಕಮ್ಯುನಿಸ್ಟರನ್ನು "ಹಿಂಸೆಯ ಆರಾಧಕರು" ಎಂದು ಖಂಡಿಸಲಾಯಿತು, ಮಿಥ್ಯಾಪವಾದ ಹೊರಿಸಲಾಯಿತು. ಯಾವ ಅಪಪ್ರಚಾರವೂ ಏನೂ ಸಾಧಿಸದಾದುದರಿಂದ ಕಮ್ಯುನಿಸ್ಟರನ್ನು ಹೊಸದಾಗಿ ಗಳಿಸಿದ ಪ್ರಭುತ್ವಶಕ್ತಿಯಿಂದ ದಮನ ಮಾಡಲು ಪ್ರಯತ್ನಿಸಲಾಯಿತು. ಈ ಪ್ರಯತ್ನ ಮೊದಲು ತೆಲಂಗಾಣಾ ಹೋರಾಟದಲ್ಲಿ ನಡೆಯಿತು ನಂತರ ಪಕ್ಷದ ಮೇಲೆ ಸುಮಾರಾಗಿ ನಿಷೇಧವನ್ನೇ ಹೇರಿ, ದೇಶದ ಹಲವು ಭಾಗಗಳಲ್ಲಿ ಅದನ್ನು ಕಾನೂನು ಬಾಹಿರ ಎಂದು ಘೋಷಿಸಿ, ಅದರ ಸಾವಿರಾರು ಮುಖಂಡರನ್ನು ಮತ್ತು ಕಾರ್ಯಕರ್ತರನ್ನು ಬಂಧಿಸಿ, ಜೈಲುಗಳಲ್ಲಿ ಹಲವಾರು ಸಂಗಾತಿಗಳನ್ನು ಕೊಲ್ಲಲಾಯಿತು.

ಆದರೆ ಇವೆಲ್ಲಾ ಪರ್ಯವಸಾನ ಗೊಂಡುದು ಹೇಗೆ ?

"ಕಮ್ಯೂನಿಸ್ಟ್ ಗೂಂಡಾಗಳು" 1952 ರ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಆಂಧ್ರ ಮತ್ತು ತೆಲಂಗಣಾ ಎರಡೂ ಪ್ರದೇಶಗಳಲ್ಲಿ ಕಾಂಗ್ರೆಸ್‌ನ ಅತೀ ಉನ್ನತ ಅಭ್ಯರ್ಥಿಗಳನ್ನೆಲ್ಲಾ ಪೂರ್ಣ ಪರಾಭವಗೊಳಿಸಿ ಚುನಾಯಿತರಾದರು. ಸಿಪಿಐ ಮತ್ತು ಅದರ ಮಿತ್ರಕೂಟದ 19 ಲೋಕ ಸಭಾ ಸದಸ್ಯರು ಆಂಧ್ರ ಮತ್ತು ತೆಲಂಗಾಣಾದಿಂದ ಆರಿಸಿ ಬಂದಿದ್ದರು. ಇದು ಭಾರತದ ಮೊದಲ ಚುನಾಯಿತ ಲೋಕ ಸಭೆಯಲ್ಲಿ 30 ಸದಸ್ಯಬಲವಿದ್ದ ಸಿಪಿಐ ಮೊದಲ ವಿರೋಧೀ ಗುಂಪಾಗಿ ಮೂಡಿ ಬರಲು ನೆರವಾಯಿತು.

ನಿರ್ಲಜ್ಜ ಕುತಂತ್ರ

ಅಷ್ಟೇ ಅಲ್ಲ ಬ್ರಿಟಿಶರು ನಿರ್ಮಿಸಿದ್ದ ಆಗಿನ ಕಂಪೋಸಿಟ್ ಮದ್ರಾಸ್ ರಾಜ್ಯದಲ್ಲಿ ಆ ರಾಜ್ಯದ ಆಂಧ್ರ, ತಮಿಳುನಾಡು, ಮಲಬಾರ್ ಹಾಗೂ ಕನ್ನಡ ಭಾಗಗಳ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಟ್ಟಾಗಿ ಕಾಂಗ್ರೆಸ್ಸನ್ನು ಪೂರ್ಣವಾಗಿ ಸೋಲಿಸಿದವು. ಗಾಂಧಿಯ ನಿಜವಾದ ಶಿಷ್ಯರು ಚುನಾವಣಾ ತೀರ್ಪನ್ನು ತಳ್ಳಿಹಾಕಲು ಈಗ ಎಲ್ಲರಿಗೂ ಸುಪರಿಚಿತ ತಂತ್ರಗಳನ್ನು ಅಂದರೆ ಜಾತಿವಾದಿ ಮತ್ತು ಕೋಮುವಾದಿ ಶಕ್ತಿಗಳೊಂದಿಗೆ ನಾಚಿಕೆಗೇಡಿನ ಕೂಟ ಕಟ್ಟಿಕೊಳ್ಳುವುದು ಮತ್ತು ಸಂವಿಧಾನದ ದುರುಪಯೋಗದ ಕುತಂತ್ರಗಳನ್ನು ಬಳಸಲಾರಂಭಿಸಿದರು. ನಿವೃತ್ತ ಗವರ್ನರ್ ಜನರಲ್ ಸಿ. ರಾಜಗೋಪಾಲಾಚಾರಿಯವರನ್ನು ನಿರ್ಲಜ್ಜ ಉಪಾಯಗಳನ್ನೆಲ್ಲಾ ಬಳಸಿಯೇ ಮದ್ರಾಸ್ ರಾಜ್ಯದ ಮುಖ್ಯ ಮಂತ್ರಿಯಾಗಿ ಕೂರಿಸಲಾಯಿತು.

ಕಮ್ಯೂನಿಸ್ಟ್ ವಿರೋಧ ಪಕ್ಷ ಸವಾಲನ್ನು ಸ್ವೀಕರಿಸಿ ಪ್ರತ್ಯೇಕ ಆಂಧ್ರ ರಾಜ್ಯದ ಸ್ಥಾಪನೆಗಾಗಿ ಹೋರಾಟವನ್ನು ಆರಂಭಿಸಿತು. ಈ ಮೂಲಕ ಕಾಂಗ್ರೆಸ್‌ನ ಕುತಂತ್ರಗಳನ್ನು ವಿಫಲಗೊಳಿಸಿ ರಾಜ್ಯಗಳನ್ನು ಭಾಷಾವಾರು ಆಧಾರದ ಮೇಲೆ ಪುನರ್ಸಂಘಟಿಸಬೇಕೆನ್ನುವ ಬಹಳ ಹಿಂದೇನೇ ಎಲ್ಲರೂ ಒಪ್ಪಿದ್ದ ನೀತಿಯನ್ನು ಪಾಲಿಸುವಂತೆ ಒತ್ತಾಯ ತರುವ ವ್ಯಾಪಕ ಪ್ರಜಾಸತ್ತಾತ್ಮಕ ಹೋರಾಟವನ್ನು ಆರಂಭಿಸಲಾಯಿತು. ಇದರ ಫಲಿತಾಂಶವಾಗಿ ಮೇಲಿನಿಂದ ಕೂರಿಸಲ್ಪಟ್ಟ ಮುಖ್ಯ ಮಂತ್ರಿ ಪೀಠ ಬಿಡಬೇಕಾಗಿ ಬಂತು. ಮಾತ್ರವಲ್ಲ ಬ್ರಿಟಿಶರು ತಯಾರಿಸಿದ ಮದ್ರಾಸ್ ಪ್ರೆಸಿಡೆನ್ಸಿ ಕೊನೆಗೂ ವಿಸರ್ಜನೆಗೊಂಡಿತು.

ಕಥೆ ಇಲ್ಲಿಗೇ ಮುಗಿಯುವುದಿಲ್ಲ. ಈಗ ಅರುಣ್ ಶೌರಿ ಪುನರುಚ್ಚರಿಸುತ್ತಿರುವ ರೀತಿಯ ಕಮ್ಯೂನಿಸ್ಟ್-ವಿರೋಧಿ ಸುಳ್ಳು ಆಪಾದನೆಗಳಿಂದ ಭಾರತೀಯ ಜನತೆ ಸದಾ ಮೋಸ ಹೋಗಲಿಲ್ಲ.

ಸದಾ ಮೋಸ ಮಾಡಲಾಗಲಿಲ್ಲ

ಕೇರಳ 1957 ರ ಮಾರ್ಚ್‌ನಲ್ಲಿ ಕಮ್ಯುನಿಸ್ಟರನ್ನು ಅಧಿಕಾರ ನಡೆಸಲು ಚುನಾಯಿಸಿ ಪ್ರಪ್ರಥಮ ಕಾಂಗ್ರೆಸ್ಸೇತರ ಸರಕಾರವನ್ನು ಆರಿಸಿತು. "ವಿಶ್ವಾಸದ್ರೋಹಿಗಳು", "ದಳ್ಳಾಳಿಗಳು" ಮತದಾರರ ವಿಶ್ವಾಸ ಗಳಿಸಿಕೊಂಡದ್ದನ್ನು ಇಲ್ಲಿ ಇನ್ನೊಮ್ಮೆ ಕಾಣಬಹುದು. ಆಗ ಸಮಾಜವಾದೀ ಸೋವಿಯೆತ್ ಸಂಘ ಮತ್ತು ಚೀನಾದೊಡನೆ ಹೆಚ್ಚುತ್ತಿದ್ದ ಮಿತ್ರತ್ವದಿಂದಾಗಿ ಚುನಾಯಿತ ಸರಕಾರದ ಮೇಲೆ ನೇರವಾಗಿ ಹಲ್ಲೆ ಮಾಡಲು ಕಾಂಗ್ರೆಸ್ ಮುಖಂಡರಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಕಲ್ಪನೆಗೆ ಬರಬಹುದಾದ ಎಲ್ಲಾ ರೀತಿಯ ಜಾತಿವಾದಿ, ಕೋಮುವಾದಿ ಉಪಪಂಗಡಗಳು, ಗುಂಪುಗಳು ಮತ್ತು ಪಕ್ಷಗಳೊಂದಿಗೆ ಸಮಯಸಾಧಕ ಮತ್ತು ಅನೀತಿಯುತ ಕೂಟಗಳನ್ನು ರಚಿಸಿಕೊಂಡು ಒಂದು ಸೂಕ್ತ ರೀತಿಯಲ್ಲಿ ಚುನಾಯಿತ ಸರಕಾರವನ್ನು ಉರುಳಿಸಲು ನಾಚಿಕೆಗೇಡಿನ "ವಿಮೋಚನಾ ಸಮರ" ಕ್ಕೆ, ಅದೂ ನಾಯರ್ ಮುಖಂಡ ದಿವಂಗತ ಎಂ. ಪದ್ಮನಾಭನ್‌ರ ನೇತೃತ್ವದಲ್ಲಿ ಇಳಿದರು.

ಹೆಚ್ಚುತ್ತಿದ್ದ ಕಮ್ಯುನಿಸ್ಟ್ ಪ್ರಭಾವವನ್ನು ತಡೆಹಿಡಿಯಲಾರದ ಕಾಂಗ್ರೆಸ್

(6ನೇ ಪುಟ ನೋಡಿ)

ಅರುಣ್ ಶೌರಿ "ಬಯಲು" ಗೊಳಿಸಿದ ಟೊಳ್ಳು ಸಂಗತಿಗಳು

[5ನೆ ಪುಟದಿಂದ]

ಭಾರತ-ಚೀನಾ ಗಡಿ ವಿವಾದದ ಸಂದರ್ಭವನ್ನು ಪೂರ್ಣವಾಗಿ ದುರುಪಯೋಗಪಡಿಸಿಕೊಂಡು ಕಮ್ಯೂನಿಸ್ಟರನ್ನು "ಚೀನೀ ಏಜೆಂಟರು" ಎಂದು ಅಪಪ್ರಚಾರ ಮಾಡಿ ಸುಮಾರು ಒಂದು ಸಾವಿರ ಸಂಖ್ಯೆಯ ಸಮಸ್ತ ನಾಯಕತ್ವವನ್ನೇ ಜೈಲುಗಳಲ್ಲಿ ಬಂಧಿಸಿಟ್ಟಿತು. ಈ ದ್ವೇಷಪೂರ್ಣ ಅಪಪ್ರಚಾರವನ್ನು ಕೇರಳದ ಮತದಾರರು ಸಂಪೂರ್ಣವಾಗಿ ಎಲ್ಲರಿಗೂ ಮನದಟ್ಟಾಗುವಂತೆ ತಿರಸ್ಕರಿಸಿದರು. 1965 ರಲ್ಲಿ ಪಕ್ಷದ ಎಲ್ಲಾ ಪ್ರಮುಖ ಕಾರ್ಯಕರ್ತರು, ಚುನಾವಣೆಗೆ ಸ್ಪರ್ಧಿಸಿದ್ದ ಅಭ್ಯರ್ಥಿಗಳನ್ನು ಕೂಡಾ ಸಿಪಿಐ (ಎಂ) ನಿಂದ ಸಶಸ್ತ್ರ ಬಂಡಾಯದ ಬೆದರಿಕೆಯಿದೆಯೆಂಬ ಅರ್ಥಹೀನ ನೆವ ಮಾಡಿಕೊಂಡು ಜೈಲುಗಳಿಗೆ ತಳ್ಳಲ್ಪಟ್ಟಿದ್ದರೂ ಕೂಡಾ ಕೇರಳದ ಮತದಾರರು ಸಿಪಿಐ [ಎಂ] ನ್ನು ವಿಧಾನಸಭೆಯಲ್ಲಿ ಅತ್ಯಂತ ದೊಡ್ಡ ಪಕ್ಷವಾಗಿ ಚುನಾಯಿಸಿದರು.

ಅಧಿಕಾರದ ಗುತ್ತೇದಾರಿಕೆಯ ಅಂತ್ಯ

1967 ರಲ್ಲಿ ಕಾಂಗ್ರೆಸ್ಸು ಹತ್ತು ರಾಜ್ಯಗಳ ಚುನಾವಣೆಗಳಲ್ಲಿ ಭಾರೀ ಸೋಲನ್ನು ಅನುಭವಿಸಿತು. ಇವುಗಳಲ್ಲಿ ಎರಡು ಕಾಂಗ್ರೆಸ್ಸೇತರ ಸರಕಾರಗಳು, ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ, ಸಿಪಿಐ (ಎಂ) ನ ನೇತೃತ್ವದಲ್ಲಿದ್ದವು. ಅದು ಕಾಂಗ್ರೆಸ್ ಅನುಭವಿಸುತ್ತಿದ್ದ ಅಧಿಕಾರದ ಗುತ್ತೇದಾರಿಕೆಯ ವಿಘಟನೆಯ ಆರಂಭ. ಅದು ದೇಶಾದ್ಯಂತ ಶ್ರಮಿಕ ಜನತೆ ಸಿಪಿಐ [ಎಂ] ನತ್ತ ಕಾಂಗ್ರೆಸ್ ದುರಾಡಳಿತದ ವಿರುದ್ಧ ಹೋರಾಟವನ್ನು ಸ್ಥೈರ್ಯದಿಂದ ಪ್ರತಿಪಾದಿಸುವ ಪಕ್ಷ ಎಂದು ನೋಡಲಾರಂಭಿಸಿದ ಅವಧಿಯ ಆರಂಭ ಕೂಡಾ. ಕಾಂಗ್ರೆಸ್ಸು ಪಶ್ಚಿಮ ಬಂಗಾಳದಲ್ಲಿ ಎಡರಂಗವನ್ನು ಛಿದ್ರಗೊಳಿಸಲು, ಕೇರಳದಲ್ಲಿ ಸಿಪಿಐ ಮತ್ತು ಇತರ ಜಾತಿವಾದಿ, ಕೋಮುವಾದಿ ಗುಂಪುಗಳ ನೆರವಿನಿಂದ. ಸಿಪಿಐ (ಎಂ) ವಿರೋಧೀ ರಂಗ ಕಟ್ಟಲು ಅತ್ಯಂತ ನಿರ್ಲಜ್ಜ ತಂತ್ರಗಳನ್ನು ಬಳಸಿತು. ಸಿಪಿಐ ಸೇರಿದ್ದ ಕಾಂಗ್ರೆಸ್ ನೇತೃತ್ವದ ಈ ಸಿಪಿಐ [ಎಂ] ವಿರೋಧೀ ರಂಗದ ಸರಕಾರ, ಒಂದು ದಶಕದ ಕಾಲದ ಅವಿಚ್ಛಿನ್ನ ಆಳ್ವಿಕೆಯ ನಂತರ 1980 ರಲ್ಲಿ ಭಾರೀ ಪರಾಭವ ಅನುಭವಿಸಿತು.

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ ಸಂವೈಧಾನಿಕ ಅಧಿಕಾರಗಳನ್ನು ದುರುಪಯೋಗಪಡಿಸಿಕೊಂಡಿತು ಮತ್ತು ಎರಡು ವರ್ಷಗಳ ಅಲ್ಪ ಅವಧಿಯಲ್ಲಿ ಮೂರು ಹೊಸ ವಿಧಾನಸಭೆಗಳು ವಿಸರ್ಜಿಸಲ್ಪಟ್ಟು, ಹೊಸ ಚುನಾವಣೆಗಳು ನಡೆದವು ರಾಜ್ಯದಲ್ಲಿ ಸಿಪಿಐ (ಎಂ) ನ್ನು ಅದರ ಅಗ್ರಗಣ್ಯ ಸ್ಥಾನದಿಂದ ಇಳಿಸಲು ಕಾಂಗ್ರೆಸ್ಸಿಗೆ ಸಾಧ್ಯವಾಗಲಿಲ್ಲ. 1972-77 ರ ಅವಧಿಯಲ್ಲಿ ಅರೆ-ಫ್ಯಾಸಿಸ್ಟ್ ಭಯೋತ್ಪಾದನಾ ತಂತ್ರ ಬಳಸಿತು. ಈ ಅವಧಿಯಲ್ಲಿ 1200 ಕಮ್ಯುನಿಸ್ಟ್ ಕಾರ್ಯಕರ್ತರ ಕೊಲೆಯಾಯಿತು; 20 ಸಾವಿರ ಜನ ಮನೆ-ಮಠ ಬಿಟ್ಟು ಹೋಗಬೇಕಾಯಿತು. ಈ ಅವಧಿಯಲ್ಲಿ ಕೇರಳದಲ್ಲೂ ಕೂಡಾ 300 ಕಮ್ಯುನಿಸ್ಟ್ ಕಾರ್ಯಕರ್ತರು ಕೊಲ್ಲಲ್ಪಟ್ಟರು.

ತ್ರಿಪುರಾದಲ್ಲಿ ಸಿ.ಪಿ.ಐ. (ಎಂ) ಪ್ರಬಲ ಸ್ಥಾನ ಗಳಿಸಿತ್ತು. ಕಾಂಗ್ರೆಸ್ ಚುನಾಯಿತ ಪ್ರತಿನಿಧಿಗಳ ಮೇಲೆ ದಮನ ಚಕ್ರ ಹರಿಯಬಿಟ್ಟು ಅವರನ್ನು ರಾಜ್ಯದ ಹೊರಗೆ ಬಂಧನದಲ್ಲಿಟ್ಟು ತಾನು ಹೇರಿದ ಆಳ್ವಿಕೆಯನ್ನು ಶಾಶ್ವತಗೊಳಿಸಲು ಪ್ರಯತ್ನಿಸಿತು.

1975 ರಲ್ಲಿ ತುರ್ತು ಪರಿಸ್ಥಿತಿ ಹೇರಿ ಕಾಂಗ್ರೆಸ್ ಸರ್ವಾಧಿಕಾರೀ ಆಳ್ವಿಕೆಗಿಳಿದದ್ದು, ಪ್ರಜಾಪ್ರಭುತ್ವವನ್ನು ಮುಳುಗಿಸಿದ್ದು ಆ ಪಕ್ಷದ ಪೂರ್ಣ ವಿಘಟನೆ, ಪ್ರಜಾಸತ್ತಾತ್ಮಕವಾಗಿ ಆಡಳಿತ ನಡೆಸಲು ಅದರ ಪೂರ್ಣ ಅಸಮರ್ಥತೆ ಮತ್ತು ಅದರ ಧೋರಣೆಗಳ ಬಗ್ಗೆ ಜನರಲ್ಲುಂಟಾದ ಭ್ರಮನಿರಸನದ ಪ್ರತಿಫಲನವಾಗಿತ್ತು.

ಆಳುವ ವರ್ಗಗಳ ಉದ್ದೇಶ ಫಲಿಸಲಿಲ್ಲ

1977 ರ ಸಾರ್ವತ್ರಿಕ ಚುನಾವಣೆಗಳಲ್ಲಿ ಆ ಪಕ್ಷವನ್ನೂ ಪೂರ್ಣವಾಗಿ ಪರಾಭವಗೊಳಿಸುವಲ್ಲಿ ಕಮ್ಯುನಿಸ್ಟರು ಮಹತ್ತ್ವಪೂರ್ಣ ಪಾತ್ರ ವಹಿಸಿದರು. ಪಶ್ಚಿಮ ಬಂಗಾಳದಲ್ಲಿ ಜನತಾ ಪಕ್ಷ ಸಿಪಿಐ (ಎಂ) ಜೊತೆಗೆ ಚುನಾವಣಾ ಮೈತ್ರಿ ಮಾಡಿಕೊಳ್ಳಲು ನಿರಾಕರಿಸಿದರೂ ಕೂಡಾ ಸಿಪಿಐ (ಎಂ) ನೇತೃತ್ವದ ರಂಗ ಭಾರೀ ಬಹುಮತ ಗಳಿಸಿತು. ತ್ರಿಪುರಾದಲ್ಲೂ ಸಿಪಿಐ (ಎಂ) ನೇತೃತ್ವದ ರಂಗ ಕಾಂಗ್ರೆಸ್ಸನ್ನು ಸದೆಬಡಿದು ವಿಜಯಶಾಲಿಯಾಯಿತು.

ನಂತರ 1980 ರಲ್ಲಿ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರಕ್ಕೆ ಹಿಂದಿರುಗಿದಾಗಲೂ ಅದರ ರಭಸವನ್ನು ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ನಿಸ್ತೇಜಗೊಳಿಸಿದ್ದು ಸಿಪಿಐ (ಎಂ). 1980 ರ ವಿಧಾನ ಸಭಾ ಚುನಾವಣೆಗಳಲ್ಲಿ ಸಿಪಿಐ [ಎಂ] ವಿರೋಧಿ ರಂಗ ಹಾಸ್ಯಾಸ್ಪದ ಸೋಲನ್ನನುಭವಿಸಿ ಸಿಪಿಐ(ಎಂ) ನೇತೃತ್ವದ ರಂಗ ಅಧಿಕಾರಕ್ಕೆ ಆರಿಸಿ ಬಂದುದನ್ನು ಕೇರಳ ಕಂಡಿತು.

ಅತ್ಯಂತ ಅಲ್ಪ ಅವಧಿಯೊಂದನ್ನು ಬಿಟ್ಟರೆ, ಸ್ವಾತಂತ್ರ್ಯದಿಂದೀಚೆಗೆ ಭಾರತೀಯ ಸಂಸತ್ತಿನಲ್ಲಿ ಕಮ್ಯುನಿಸ್ಟರು ಮತ್ತು ಅವರ ಮಿತ್ರರು ಏಕೈಕ ದೊಡ್ಡ ವಿರೋಧಿ ಗುಂಪಾಗಿದ್ದಾರೆ. ಸಂಸತ್ತಿನ ಎರಡು ಸದನಗಳಲ್ಲಿ ಕೇವಲ ಸಿಪಿಐ (ಎಂ) ಗೇ 50 ಸದಸ್ಯರಿದ್ದಾರೆ. ಇದಲ್ಲದೆ ಇತರ ಎಡ ಗುಂಪುಗಳಾದ ಸಿಪಿಐ, ಫಾರ್ವರ್ಡ್ ಬ್ಲಾಕ್, ಆರ್.ಎಸ್.ಪಿ. ಯ ಇನ್ನೂ 30 ಸದಸ್ಯರು ಸಂಸತ್ತಿನ ಎರಡೂ ಸದನಗಳಲ್ಲಿದ್ದಾರೆ.

ಈ ಮೇಲಿನ ಘಟನೆಗಳ ವಿವರಣೆಗಳಿಂದ ಬೂರ್ಜ್ವಾ- ಭೂ ಮಾಲಕ ವರ್ಗಗಳು ಮತ್ತೆ-ಮತ್ತೆ ಪ್ರಯತ್ನಿಸಿದರೂ ಕೂಡಾ, ಭಯಂಕರ ರಾಜಕೀಯ ಮತ್ತು ಸೈದ್ಧಾಂತಿಕ ಹಲ್ಲೆ ನಡೆಸಿದರೂ ಕೂಡಾ ಈ ದೇಶದಲ್ಲಿ ಕಮ್ಯುನಿಸ್ಟರ ಸಂಖ್ಯೆ ಇಳಿಮುಖವಾಗಿ ಅಳಿಸಿ ಹೋಗುವುದಂತೂ ದೂರವಿರಲಿ, ಅವರ ಪ್ರಭಾವ ಹಲವು ಪಟ್ಟು ಹೆಚ್ಚಿದೆ.

ಕಮ್ಯುನಿಸ್ಟರು ಮಾಡಿದರು ಎನ್ನಲಾದ "ವಿಶ್ವಾಸ ದ್ರೋಹ" ದ ನಂತರದ 42 ವರ್ಷಗಳ ಬೆಳವಣಿಗೆಗಳ ಈ "ವಿಶ್ವಾಸದ್ರೋಹಿ' ಗಳೇ ಸಾಮ್ರಾಜ್ಯಶಾಹೀ-ವಿರೋಧಿ ಹೋರಾಟದ ಅಗ್ರಪಂಕ್ತಿಯಲ್ಲಿದ್ದಾರೆ, ರಾಷ್ಟ್ರೀಯ ಐಕ್ಯತೆಯ ರಕ್ಷಣೆಗಾಗಿ, ಕೋಮು ಸೌಹಾರ್ದವನ್ನು ಕಾಪಾಡುವುದಕ್ಕಾಗಿ ಅಗಾಧ ತ್ಯಾಗ ಮಾಡಿದ್ದಾರೆ, ಮತ್ತು ಆಳುವ ವರ್ಗಗಳ ಜನವಿರೋಧೀ ಧೋರಣೆಗಳ ವಿರುದ್ಧ ರಭಸಪೂರ್ಣವಾಗಿ ಹೋರಾಡಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ. ಇದಕ್ಕೆ ವ್ಯತಿರಿಕ್ತವಾಗಿ, ಯಾರ ರಕ್ಷಣೆಗಾಗಿ ಅರುಣ್ ಶೌರಿಯ "ಸಂಶೋಧನಾತ್ಮಕ" ಲೇಖನಗಳು ಟೊಂಕ ಕಟ್ಟಿವೆಯೋ ದೇಶದ ಆ ಕಾಂಗ್ರೆಸ್ ಆಳರಸರು ಹೆಚ್ಚೆಚ್ಚಾಗಿ ಸಾಮ್ರಾಜ್ಯಶಾಹೀ ನೆರವನ್ನು ಅವಲಂಬಿಸುತ್ತಿದ್ದಾರೆ, ಬಹುರಾಷ್ಟ್ರೀಯ ಗುತ್ತೇದಾರಿ ಕಂಪೆನಿಗಳೊಂದಿಗೆ ನಿಕಟ ಸಹಯೋಗ ಏರ್ಪಡಿಸಿ ಕೊಳ್ಳುತ್ತಿದ್ದಾರೆ ಮತ್ತು ಜನವಿರೋಧಿ, ಪ್ರಜಾಪ್ರಭುತ್ವ ವಿರೋಧೀ ಧೋರಣೆಗಳನ್ನು ಅನುಸರಿಸಿ ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ವಿಚ್ಛಿದ್ರಗೊಳಿಸುತ್ತಿದ್ದಾರೆ.

ರಾಷ್ಟ್ರೀಯತೆಯ ಪ್ರಶ್ನೆಯೇ ಆಗಲಿ, ಜಾತ್ಯತೀತತೆ ಮತ್ತು ಕೋಮು ಸೌಹಾರ್ದದ ಪ್ರಶ್ನೆಯಾಗಲಿ, ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವ ಪ್ರಶ್ನೆಯೇ ಆಗಲಿ ಎಲ್ಲದರಲ್ಲೂ ಕಾಂಗ್ರೆಸ್ ಅಪಖ್ಯಾತಿ ಹೊಂದಿದೆ ಎಂಬುದನ್ನು ಕಾಣಲು ಭಾರತೀಯ ಜನತೆಗೆ ಈಗ ಸಾಧ್ಯವಾಗಿದೆ. ಬಿಜೆಪಿಯೂ ಸೇರಿದಂತೆ ಬೇರಾವ ಬಲಪಂಥೀಯ ಪಕ್ಷವೂ ಕಾಂಗ್ರೆಸ್ ದುರಾಡಳಿತಕ್ಕೆ ಪರ್ಯಾಯವನ್ನು ಒದಗಿಸುವ ಸಾಮರ್ಥ್ಯ ಪಡೆದಿಲ್ಲ. ದೇಶಾದ್ಯಂತ ಬೂರ್ಜ್ವಾ-ಭೂಮಾಲಕ ದುರಾಡಳಿತದ ವಿರುದ್ಧ ಜನತೆಯ ಹೋರಾಟಗಳಲ್ಲಿ ಅಗ್ರಪಂಕ್ತಿಯಲ್ಲಿರುವುದು ಕಮ್ಯುನಿಸ್ಟ್ ಆಂದೋಲನವೇ. ದೇಶದ ಕಮ್ಯುನಿಸ್ಟ್ ಆಂದೋಲನದ ಹೆಚ್ಚುತ್ತಿರುವ ಈ ಪ್ರಭಾವ ಮತ್ತು ಕಾಂಗ್ರೆಸ್ ದುರಾಡಳಿತಕ್ಕೆ ಪರ್ಯಾಯವೊಂದನ್ನು ಒದಗಿಸುವಲ್ಲಿ ಕಮ್ಯುನಿಸ್ಟರು ಈಗ ವಹಿಸಲಾರಂಭಿಸಿರುವ ನಿರ್ಣಾಯಕ ಪಾತ್ರ ಇವೇ ಬೂರ್ಜ್ವಾ ಸಿದ್ಧಾಂತಿಗಳಿಗೆ ಸುಳ್ಳು ಮತ್ತು ದುರುದ್ದೇಶಪೂರ್ಣ ಕಮ್ಯುನಿಸ್ಟ್-ವಿರೋಧಿ ಅಪಪ್ರಚಾರ ಹರಿಯಬಿಡುವಂತೆ ಬಲವಂತಪಡಿಸುತ್ತಿರುವ ಅಂಶಗಳು.

ಕಮ್ಯುನಿಸ್ಟರು ಒಂದು ಮಹಾಸಾಧನೆಯಿಂದ ಇನ್ನೊಂದು ಮಹಾಸಾಧನೆಯತ್ತ ಮುನ್ನಡೆಯುತ್ತಿರುವ ಮಾರ್ಕ್ಸ್‌ವಾದ-ಲೆನಿನ್‌ವಾದದ ಗುರಿ ಅಂಗೀಕರಿಸಿದ್ದಾರೆ. ಅರುಣ್ ಶೌರಿ ಕೊಳೆಯುತ್ತಿರುವ ಮರಣಶಯ್ಯೆಯಲ್ಲಿರುವ ಬಂಡವಾಳಶಾಹಿಯ ಧ್ಯೇಯವನ್ನು ಪ್ರತಿಪಾದಿಸುತ್ತಿದ್ದಾರೆ. ಮಿಥ್ಯಾಪವಾದಗಳು ಚರಿತ್ರೆಯ ದಿಕ್ಕನ್ನೇನೂ ಬದಲಿಸಲಾರವು.

★ ಮುಗಿಯಿತು ★

ಕಲ್ಲಿದ್ದಲು ಉದ್ಯಮ ಕಾರ್ಮಿಕರು ಮುಷ್ಕರಕ್ಕೆ ಸಜ್ಜು

ಸಿ.ಐ.ಟಿ.ಯು. ನ ಪ್ರಧಾನ ಕಾರ್ಯದರ್ಶಿ ಹಾಗೂ ಲೋಕ ಸಭೆಯಲ್ಲಿ ಸಿ.ಪಿ.ಐ.(ಎಂ)ಗುಂಪಿನ ನಾಯಕರಾಗಿರುವ ಕಾ. ಸಮರ್ ಮುಖರ್ಜಿ ಅವರು ಪ್ರಧಾನಿ ಶ್ರೀಮತಿ ಗಾಂಧಿಯವರನ್ನು ಭೇಟಿಯಾಗಿ ಅಗತ್ಯ ಸೇವಾ ಕಾಯಿದೆಯಡಿಯಲ್ಲಿ, ಮುಷ್ಕರಗಳನ್ನು ಪ್ರತಿಬಂಧಿಸುವ ನೋಟಿಫಿಕೇಶನ್ ಅನ್ನು ಸರ್ಕಾರ ನೀಡಿರುವುದರಿಂದ ಕಲ್ಲಿದ್ದಲು ಉದ್ಯಮದಲ್ಲಿ ಉದ್ಭವಿಸಿರುವ ಸ್ಫೋಟಕ ಪರಿಸ್ಥಿತಿಯನ್ನು ವಿವರಿಸಿದ್ದಾರೆ.

ಜುಲೈ 11 ರಂದು ಈ ಕುರಿತು ಪ್ರಧಾನಿಗೆ ಬರೆದಿದ್ದ ಪತ್ರವನ್ನು ಸಂಬಂಧಿಸಿದ ಇಲಾಖೆಗೆ ವರ್ಗಯಿಸಲಾಗಿದ್ದು ಅದರಲ್ಲಿ ಕಲ್ಲಿದ್ದಲು ಉದ್ಯಮದಲ್ಲಿ ಉಂಟಾಗಿರುವ ಗಂಭೀರ ಪರಿಸ್ಥಿತಿಯನ್ನು ವಿವರಿಸಿದ್ದಾರೆ. ಉದ್ಯಮದ ಅಧಿಕಾರಿಗಳು ವೇತನ ಒಪ್ಪಂದವನ್ನು ಜಾರಿಗೆ ತರದೆ ಜುಲ್ಮಾನೆ ವಿಧಿಸಲು ವೇತನ ಕಡಿತ, ವರ್ಗಾವಣೆ ಮತ್ತು ಕೆಲಸದಿಂದ ತೆಗೆದು ಹಾಕುವ ರೀತಿಯ ದಂಡನೆಗಳನ್ನು ವಿಧಿಸುತ್ತಿದ್ದಾರೆ. ಅಗತ್ಯ ಸೇವಾ ಕಾಯಿದೆಯಡಿಯ ನೋಟಿಫಿಕೇಶನ್‌ನಿಂದಾಗಿ ಸರ್ಕಾರವೂ ಸಹ ಕಾರ್ಮಿಕರನ್ನು ಶಿಕ್ಷೆಗೆ ಗುರಿಪಡಿಸಲು ಬಯಸುವುದನ್ನು ತೋರಿಸುತ್ತದೆ. ಇದನ್ನು ಪ್ರತಿಭಟಿಸಲು ಜಂಟೀ ಕ್ರಿಯಾ ಸಮಿತಿಯು ಸಹಜವಾಗಿಯೇ ಅನಿರ್ದಿಷ್ಟ ಕಾಲಾವಧಿಯ ಮುಷ್ಕರಕ್ಕೆ ಸಜ್ಜಾಗುತ್ತಿದೆ.

ನೋಟಿಫಿಕೇಶನ್ ಅನ್ನು ವಾಪಸ್ ಪಡೆಯದಿದ್ದಲ್ಲಿ, ಕಾರ್ಮಿಕರ ಮೇಲಾಗುತ್ತಿರುವ ಅನ್ಯಾಯಗಳನ್ನು ನಿಲ್ಲಿಸದಿದ್ದಲ್ಲಿ ಕಾರ್ಮಿಕ ವರ್ಗ ಸುಮ್ಮನೆ ನೋಡುತ್ತಾ ಕುಳಿತಿರಲು ಸಾಧ್ಯವಿಲ್ಲ ಎಂಬುದಾಗಿ ಸಿ.ಐ.ಟಿ.ಯು ಪ್ರಕಟನೆ ತಿಳಿಸಿದೆ.

ತೊಟ್ಟಿಲಿನಿಂದ ಈಜು ಕೊಳಕ್ಕೆ

ಒಂದು ವರ್ಷ ತುಂಬಿದ ಪುಟಾಣಿ ಬಾಲಕಿ ಮಾರ್ಯಾ ತನ್ನ ಪ್ರಥಮ ಹುಟ್ಟು ಹಬ್ಬವನ್ನು ಈಜು ಕೊಳದಲ್ಲಿ ಈಜುತ್ತಾ ಆಚರಿಸಿದಳು. ಈಜು ಆಕೆಯ ಅಚ್ಚು ಮೆಚ್ಚಿನ ಹವ್ಯಾಸ.

ಮಾರ್ಯಾ ಹುಟ್ಟಿ ಒಂದು ತಿಂಗಳಲ್ಲಿ ಅವಳ ತಾಯಿ ಮೋಲ್ಗಾ ಅರ್ಕ್ಯೊನೋವಾ ಮಕ್ಕಳ ಕ್ಲಿನಿಕ್‌ನ ಈಜು ಕೊಳವೊಂದರಲ್ಲಿ ಮಗಳಿಗೆ ಈಜು ಕಲಿಸಲು ತೊಡಗಿದಳು. ಪ್ರಾರಂಭದಲ್ಲಿ ಪುಟಾಣಿ ಮಗುವಿಗೆ ಈಜು ಅತ್ಯಂತ ಪ್ರಯಾಸಕರವೆನಿಸಿದರೂ ಕ್ರಮೇಣ ಹಲವು ದಿನಗಳ ತರಬೇತಿ ಬಳಿಕ ಮಾರ್ಯಾ ಈಜುವುದನ್ನು ಕರಗತ ಮಾಡಿಕೊಂಡಳು. ಮಾರ್ಯಾ ಇಂದು ಆರೋಗ್ಯ ಕಾಂತಿ ಚಿಮ್ಮುವ ಸುಂದರ ಬಾಲಕಿಯಾಗಿ ಬೆಳೆದಿದ್ದಾಳೆ.

ಎಳೆಯ ಕಂದಮ್ಮಗಳಿಗೆ ನಡೆಯುವುದನ್ನು ಕಲಿಸಲು ಮುನ್ನವೇ ಈಜುವುದನ್ನು ಕಲಿಸಿರುವ ಸಾವಿರಾರು ಸೋವಿಯತ್ ಕುಟುಂಬಗಳಲ್ಲಿ ಹಸುಳೆಗಳು ಮಾರ್ಯಾಳಂತೆಯೇ ಉತ್ತಮ ಆರೋಗ್ಯದಿಂದ ಬೆಳೆದಿವೆ.

ಬಾಲ್ಯದಲ್ಲಿಯೇ ಎಳೆಯ ಮಕ್ಕಳಿಗೆ ಈಜು ಕಲಿಸುವಿಕೆಗೆ ಅಸಾಧಾರಣ ಮಹತ್ವವಿದೆ. ಮಕ್ಕಳ ಆರೋಗ್ಯ ವರ್ಧನೆಯಲ್ಲಿ ಅದು ಪ್ರಧಾನ ಪಾತ್ರ ವಹಿಸುತ್ತದೆ. ಮಾಸ್ಕೋದಲ್ಲಿರುವ ಆರೋಗ್ಯ ಕೇಂದ್ರದ ಅಧಿಕಾರಿಗಳು ನವಜಾತ ಶಿಶುಗಳಿಗೆ ಈಜುವುದರಲ್ಲಿ ತರಬೇತಿ ನೀಡುವ ಸಾರ್ವತ್ರಿಕ ಕಾರ್ಯಕ್ರಮವೊಂದನ್ನು ರೂಪಿಸಿದ್ದಾರೆ. ಮಾಸ್ಕೋ ನಗರವೊಂದರಲ್ಲಿಯೇ ಈಜು ತರಬೇತಿ ಪಡೆದ 15 ಸಾವಿರ ಎಳೆಯ ಕಂದಮ್ಮಗಳಿವೆ.

ಮಾಸ್ಕೋದಲ್ಲಿ ಶಿಶು ಹೊರರೋಗಿಗಳ ಚಿಕಿತ್ಸಾಲಯವೊಂದಿದೆ. ಅಲ್ಲಿಗೆ ನೀವು ಭೇಟಿ ನೀಡಿದರೆ ದಾದಿಯೊಬ್ಬಳು ಅಳುತ್ತಿರುವ ಪುಟ್ಟ ಕಂದನನ್ನು (ಜನಿಸಿ ಮೂರು ವಾರವಷ್ಟೇ ಕಳೆದ ಪುಟಾಣಿ) ಎತ್ತಿಕೊಂಡ ದೃಶ್ಯ ನೋಡಬಹುದು. ಮಗುವಿಗೆ ಸಣ್ಣ ಪುಟ್ಟ ಅಂಗ ಸಾಧನೆ ಮಾಡಿಸಿದ ಬಳಿಕ ಅದನ್ನು ಮೆಲ್ಲಗೆ ಈಜು ಕೊಳದಲ್ಲಿ ಇರಿಸಲಾಗುವುದು. ತಾಯಿಯಂತೂ ಉಸಿರು ಬಿಗಿ ಹಿಡಿದು ಅತ್ಯಂತ ವಿಸ್ಮಯ ಚಕಿತಳಾಗಿ ಈ ದೃಶ್ಯವನ್ನು ನೋಡುತ್ತಿರುತ್ತಾಳೆ. ಎಳೆಮಗು ಅಳುವುದನ್ನು ನಿಲ್ಲಿಸಿ ದಾದಿಯ ನೆರವಿನಿಂದ ತಣ್ಣಗಿನ ನೀರಿನಲ್ಲಿ ಮೆಲ್ಲಗೆ ಕೈಕಾಲು ಬಡಿದು ಮುಂದೆ ಸಾಗಲು ಯತ್ನಿಸುತ್ತದೆ.

ಸಂಪಾದಕ ನಂದಿ ಬಯಸುವ 'ಸ್ವಾತಂತ್ರ್ಯದ' ರಕ್ಷಣೆ

ಇಲ್ಲಸ್ಟ್ರೇಟೆಡ್ ವೀಕ್ಲಿಯ ಜುಲೈ 15 ರ ಸಂಚಿಕೆಯಲ್ಲಿ ಕಾ| ಬಸವಪುನ್ನಯ್ಯನವರು ಅರುಣ್ ಶೌರಿಯ ಲೇಖನಗಳಿಗೆ ಬರೆದಿರುವ ಉತ್ತರದ ಎರಡು ಮತ್ತು ಮೂರನೇಯ ಕಂತಿನ ಲೇಖನಗಳನ್ನು ಪ್ರಕಟಿಸಲಾಗಿದೆ. ಅದರೊಂದಿಗೇ ವೀಕ್ಲಿಯ ಸಂಪಾದಕ ಪ್ರೀತೀಶ್ ನಂದಿಯು ಸಿಪಿಐ(ಎಂ) ನ ಅಪಾದನೆಗಳೆಂದು ಕರೆಯುವ ಅಂಶಗಳಿಗೆ ಧೀರ್ಘವಾದ ಮಾರುತ್ತರವನ್ನೂ ಪ್ರಕಟಿಸಲಾಗಿದೆ. ಶೌರಿಯ ಒಟ್ಟಾರೆ ಉತ್ತರವು ಯಾವುದನ್ನು ಸಮರ್ಥಿಸಿಕೊಳ್ಳಲಾಗುವುದಿಲ್ಲವೊ ಅದನ್ನು ಅನುಚಿತ ಮಾರ್ಗದಿಂದ ಸಮರ್ಥಿಸಿಕೊಳ್ಳುವ ಪ್ರಯತ್ನವಾಗಿದೆ. ಅವರ ಉತ್ತರಕ್ಕೆ "ಸಂಪಾದಕನ ಸ್ವಾತಂತ್ರ್ಯದ ರಕ್ಷಣೆಯಲ್ಲಿ" ಎನ್ನುವ ಭಾರೀ ಶಿರೋನಾಮೆಯನ್ನು ನೀಡಿದ್ದಾರೆ. ಈ ಇಡೀ ಪ್ರಕರಣದಲ್ಲಿ ಸಂಪಾದಕನ ಸ್ವಾತಂತ್ರ್ಯದ ಪ್ರಶ್ನೆಯಾದರು ಎಲ್ಲಿದೆ? ನಂದಿ ತಾನೇ ಹೇಳಿಕೊಳ್ಳುವಂತೆ "ಮಾರುತ್ತರ ಪ್ರಕಟಿಸುದಕ್ಕೆ ಆಸಕ್ತಿಯು ಸಂಪೂರ್ಣವಾಗಿ ನನ್ನ ಕಡೆಯಿಂದಲೇ ಬಂದಿದೆ ಮತ್ತು ಶೌರಿಯ ಆಪಾದನೆಗಳಿಗೆ ಸಿಪಿಐ [ಎಂ] ಉತ್ತರ ನೀಡುವ ಹಕ್ಕನ್ನು ನೀಡುವುದಕ್ಕೆ ನಾನು ಕಾತುರನಾಗಿದ್ದುದು ಇದರಿಂದ ವ್ಯಕ್ತವಾಗುತ್ತದೆ". ಹಾಗಿದ್ದಲ್ಲಿ ಈಗ ಬಾಯಿ ಬಡಿದುಕೊಳ್ಳುತ್ತಿರುವುದೇಕೆ? ಅಥವಾ ನಂದಿ ಅವರಿಗೆ ಸಂಪಾದಕನ ಸ್ವಾತಂತ್ರ್ಯವೆಂದರೆ ಲೇಖಕ ನೀಡಿರುವ ಶಿರೋನಾಮೆಯನ್ನು ವಿರುದ್ಧ ಅರ್ಥ ಬರುವಂತೆ ತಿರುಚುವುದೆಂದೆ ಮತ್ತು ಸಂಪಾದಕನೇ ನೀಡಿದ ವಾಗ್ದಾನದಿಂದ ಹಿಂದಕ್ಕೆ ಸರಿಯುವುದೆ?

ಈಗ ಪ್ರೀತೀಶ್ ನಂದಿಯವರು ಏನು ಹೇಳುತ್ತಾರೆ? ಜೂನ್ 3 ರ ಸಂಚಿಕೆಯಲ್ಲಿ ಮೊದಲನೆಯ ಕಂತನ್ನು ಪ್ರಕಟಿಸಿದ ನಂತರ ಉಳಿದ ಲೇಖನಗಳನ್ನು ಮುಂದಿನ ಸಂಚಿಕೆಗಳಲ್ಲಿ ಪ್ರಕಟಿಸಲಿಲ್ಲವೇಕೆಂದು ವಿವರಿಸದೆ ಉಳಿದೆಲ್ಲವನ್ನು ಮಾತನಾಡುತ್ತಾರೆ.

ಅರುಣ್ ಶೌರಿಗೆ ಸಿ.ಪಿ.ಐ. (ಎಂ) ನಾಲ್ಕು ಭಾಗಗಳಲ್ಲಿ ಉತ್ತರವನ್ನು ಬರೆದಿದೆ. ನಾಚಿಕೆಗೇಡಿನ ಸಂಗತಿಯೆಂದರೆ ಅಂತಹ ಉತ್ತರ ಒಂದು ಲೇಖನದಲ್ಲಿ, ನಾಲ್ಕು ಲೇಖನಗಳಲ್ಲಿ ಅಥವಾ ಇನ್ನೂ ಹೆಚ್ಚಿನ ಲೇಖನಗಳಲ್ಲಿರಬಹುದೆಂದು ತಿಳಿಯದ ಸಂಪಾದಕರೊಬ್ಬರನ್ನು ವೀಕ್ಲಿ ಹೊಂದಿದೆ. ನಂದಿ ತಾನಾಗಿಯೇ ಒಪ್ಪಿಕೊಂಡಿದ್ದಂತೆ ಸಿಪಿಐ (ಎಂ) ನ ಉತ್ತರವನ್ನು ಪ್ರಕಟಿಸಬೇಕಾಗಿತ್ತು. ಆದರೆ ನಾವು ಪ್ರೆಸ್ ಕೌನ್ಸಿಲ್‌ಗೆ ದೂರು ನೀಡಿದ್ದು ತಿಳಿಯುವ ತನಕ ನಂದಿಗೆ ತನ್ನ ಜವಾಬ್ದಾರಿಯ ಅರಿವಾಗಲಿಲ್ಲ. ಇಡೀ ಪ್ರಕರಣದ ಜೀವಾಳ ಇದಾಗಿದ್ದು ನಂದಿಯ ಯಾವುದೇ ಶಬ್ದಗಳ ಕಸರತ್ತು ಆತನನ್ನು ರಕ್ಷಿಸುವುದಿಲ್ಲ.

ಇ. ಎಂ. ಎಸ್. ಪತ್ರದೊಂದಿಗೆ ಬಸವಪುನ್ನಯ್ಯನವರ ಲೇಖನವನ್ನು ಪಡೆದಿದ್ದಾಗಿ ನಂದಿ ಒಪ್ಪಿಕೊಳ್ಳುತ್ತಾರೆ ಉತ್ತರದ ಮೊದಲನೆ ಕಂತು ಇದೆಂದು ಪತ್ರದಲ್ಲಿ ಸ್ಪಷ್ಟಪಡಿಸಲಾಗಿದೆ. ಮೊದಲನೆಯ ಕಂತು ಮೇ 9 ಕ್ಕೆ ಸಿದ್ಧವಾಗಿದ್ದು ಅದಾದ ನಂತರ ಪೀಪಲ್ಸ್ ಡೆಮಾಕ್ರಸಿಯು ಮೇ 13, 20, 27 ಮತ್ತು ಜೂನ್ 3 ಸಂಚಿಕೆಯಲ್ಲಿ ಉತ್ತರದ ಮೊದಲನೆ ಕಂತನ್ನು ಪ್ರಕಟಿಸಲಿಲ್ಲ. ಏಕೆಂದರೆ ವೀಕ್ಲಿಗೆ ಲೇಖನಗಳನ್ನು ಕಳಿಸಿದ ನಂತರ ಅದರ ಪ್ರಕಟಣೆಗೆ ನಾವು ಕಾಯಬೇಕಾಗಿತ್ತು.

ಇ.ಎಂ.ಎಸ್. ಮೇ 9 ರ ಪತ್ರದಲ್ಲಿ "ಪಾಲಿಟ್‌ಬ್ಯೂರೋ ಸದಸ್ಯ ಎಂ. ಬಿ. ಅವರ ಮೊದಲನೆಯ ಲೇಖನವನ್ನು ಕಳಿಸುತ್ತಿದ್ದೇನೆ... ನಿಮ್ಮ ಪ್ರಕಟಣೆಯ ದಿನಾಂಕಗಳನ್ನು ನೋಡಿಕೊಂಡು ಮುಂದಿನ ಲೇಖನಗಳನ್ನು ಕಳಿಸಲಾಗುತ್ತದೆ" ಎಂದು ನಿಚ್ಚಳವಾಗಿ ಬರೆದಿದ್ದಾರೆ. ಆದರೂ ನಂದಿ "ನಂಬೂದರಿಪಾದರವರು ಮತ್ತೊಂದು ಲೇಖನದ ಬಗ್ಗೆ ಬರೆದಿದ್ದರು ಎನ್ನುತ್ತಾರೆ."

"ನಂತರದ ಲೇಖನಗಳು" ಮತ್ತು "ಮತ್ತೊಂದು ಲೇಖನ" ಇವುಗಳ ವ್ಯತ್ಯಾಸ ವೀಕ್ಲಿಯ ಅತ್ಯಂತ ಕಿರಿಯ ಪತ್ರಿಕೋದ್ಯೋಗಿಗೂ ತಿಳಿಯುವಂತಹುದಾಗಿದ್ದು ಅದರ ಸಂಪಾದಕರಿಗೆ ಮಾತ್ರ ಅರ್ಥವಾಗುವಂತೆ ಕಾಣುತ್ತಿಲ್ಲ. ಅದಕ್ಕೂ ಹೇಯವಾದುದೆಂದರೆ ಉತ್ತರದ ಶಿರೋನಾಮೆಯನ್ನು ಅಪಾರ್ಥ ಬರುವಂತೆ ತಿರುಚಿರುವುದು. "ಅರುಣ್ ಶೌರಿಯವರು ಬಯಲು ಗೊಳಿಸಿದ ಟೊಳ್ಳು ಸಂಗತಿಗಳು" ಎನ್ನುವುದನ್ನು "ಕಳೆದುಕೊಂಡ ಗೌರವದ ರಕ್ಷಣೆಯಲ್ಲಿ" ಎಂದು ಬದಲಾಯಿಸಲಾಗಿದೆ. ಅದಕ್ಕೆ ನೀಡುವ ಕಾರಣವೆಂದರೆ; ಹೆಚ್ಚು ಜನರು ಲೇಖನವನ್ನು ಓದುವಂತೆ ಶಿರೋನಾಮೆಯನ್ನು ಆಕರ್ಷಕವಾಗಿ ಮಾಡುವುದು ವಿಷಯ ಅಷ್ಟು ಸರಳವೆಂದು ನಾವು ತಿಳಿಯಬೇಕಾಗಿಲ್ಲ.

ಅರುಣ್ ಶೌರಿಯ ಅಜ್ಞಾನ

ಅರುಣ್ ಶೌರಿಯು ಬರೆದಿರುವ 50,000 ಕ್ಕೂ ಹೆಚ್ಚು ಪದಗಳ ಲೇಖನದಲ್ಲಿ ಹೊಸ ವಿಷಯವನ್ನೇನೂ ಹೇಳದೆ ಕೇವಲ ಅವನ ಅಜ್ಞಾನವನ್ನು ಪ್ರದರ್ಶಿಸಲಾಗಿದೆ.. ಜಗತ್ತನ್ನೇ ಅಲ್ಲೋಲ ಕಲ್ಲೋಲ ಮಾಡುವ ವಿಷಯವನ್ನು ಹುಡುಕಿರುವುದಿರಲಿ ಒಂದೇ ಒಂದು ಹೊಸ ಅಂಶವನ್ನೂ ಶೌರಿ ಹೊರಗೆಡಹಲು ಸಾಧ್ಯವಾಗಿಲ್ಲ. ಆ ಲೇಖನಗಳಲ್ಲಿರುವ ಎಲ್ಲ ವಿವರಗಳು ಒಂದಲ್ಲ ಒಂದು ಸಮಯದಲ್ಲಿ ಪಕ್ಷದ ಪತ್ರಿಕೆ "ಪೀಪಲ್ಸ್ ವಾರ್" ಮತ್ತಿತರ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಶೌರಿಗೆ ನಾವು ಕೊಟ್ಟ ಉತ್ತರವು ಆ ಕಾಲದಲ್ಲಿನ ಪಕ್ಷದ ಮೂಲಭೂತ ನಿಲುವಿನ ತಾತ್ವಿಕ ಸಮರ್ಥನೆಯಾಗಿದೆ. ಹಲವಾರು ಓರೆಕೋರೆಗಳಿದ್ದರು ಅವು ಪಕ್ಷದ ಮೂಲ ನಿಲುವಿನ ಯಾಥಾರ್ಥತೆಯನ್ನು ವಿಕಾರ ಗೊಳಿಸುವುದಿಲ್ಲ. ಅವುಗಳ ಬಗ್ಗೆ ನಾವು ನಾಚಿಕೆ ಪಡಬೇಕಾದುದೇನಿಲ್ಲ ಅಥವಾ ಪಕ್ಷ ತನ್ನ ಘನತೆಯನ್ನೂ ಕಳೆದುಕೊಂಡಿಲ್ಲ. 1948 ರಷ್ಟು ಹಿಂದೆಯೇ ನಮ್ಮ ತಪ್ಪುಗಳನ್ನು ಆತ್ಮ ವಿಮರ್ಶೆಯ ಮೂಲಕ ವಿವೇಚಿಸಲಾಯಿತು. ಅದಾದ ಮೇಲೂ ಅರುಣ್ ಶೌರಿಯು ಭಾರಿ ಬಹಿರಂಗಗೊಳಿಸಿರುವುದಾದರೂ ಏನು? ಆದ್ದರಿಂದಲೇ ಶಿರೋನಾಮೆಯನ್ನು "ಅರುಣ್ ಶೌರಿಯವರು ಬಹಿರಂಗೊಳಿಸಿದ ಟೊಳ್ಳು ಸಂಗತಿಗಳೆಂದು" ಕೊಡಲಾಯಿತು. ಶಿರೋನಾಮೆಯನ್ನು "ಕಳೆದುಕೊಂಡ ಗೌರವದ ರಕ್ಷಣೆಯಲ್ಲಿ" ಎಂದು ತಿರುಚುವುದರ ಮೂಲಕ ಇಡೀ ಉತ್ತರದ ಜೀವಾಳವನ್ನೇ ಅಯೋಗ್ಯ ರೀತಿಯಲ್ಲಿ ಅಲ್ಲಗಳೆಯಲು ಪ್ರಯತ್ನಿಸಿ ಅರುಣ್ ಶೌರಿಯ ಲೇಖನಗಳಿಗೆ ಇಂಬು ಕೊಡಲು ಯತ್ನಿಸಲಾಗಿದೆ.

ನಂದಿ ತನ್ನ ಉತ್ತರದಲ್ಲಿ ಎರಡು ಮೂರು ಕಡೆ ನಾಲ್ಕನೇ ಲೇಖನ ಇನ್ನೂ ತಲುಪಿಲ್ಲವೆಂದು ಹೇಳಿದ್ದಾರೆ. ನಂದಿ ಮರೆವು ರೋಗದಿಂದ ನರಳುತ್ತಿಲ್ಲವಾದರೆ ಅದಕ್ಕೆ ಕಾರಣ ಗೊತ್ತಿರಬೇಕು. ಇ.ಎಂ.ಎಸ್. ಜೂನ್ 15 ರಂದು ನಂದಿಗೆ ಬರೆದ ಪತ್ರವು ಈ ಸಾಲಿನೊಂದಿಗೆ ಕೊನೆಗೊಳ್ಳುತ್ತದೆ. "ನಾಲ್ಕನೇ ಹಾಗೂ ಕೊನೆಯ ಲೇಖನವು ನಿಮ್ಮಿಂದ ನನಗೆ ಉತ್ತರ ದೊರೆತ ನಂತರ ರವಾನಿಸಲಾಗುತ್ತದೆ."

ನಂದಿ ಈ ಪತ್ರಕ್ಕೆ ಉತ್ತರ ಬರೆಯದೆ ಒಂದು ತಿಂಗಳ ನಂತರ "ಸಿಪಿಐ [ಎಂ] ನ ಆಪಾದನೆಗಳಿಗೆ ಉತ್ತರ" ಎನ್ನುವ ಲೇಖನವನ್ನು ವೀಕ್ಲಿಯಲ್ಲಿ ಬರೆದಿದ್ದಾರೆ. ಆದಾಗ್ಯೂ ಅವರ ಉತ್ತರಕ್ಕೆ ನಮ್ಮ ಮಾರುತ್ತರ ಹಾಗೂ ನಾಲ್ಕನೇ ಲೇಖನವನ್ನು ಅವರಿಗೆ ಕಳಿಸುತ್ತಿದ್ದೇವೆ. ಇವೆರಡನ್ನೂ ಏನು ಮಾಡುತ್ತಾರೆ ಎಂದು ಕಾದು ನೋಡೋಣ.

○

ಪಕ್ಷದ ಚಟುವಟಿಕೆಗಳು

ಬಿಜಾಪುರ

ಬಿಜಾಪುರ ಜಿಲ್ಲಾ ಪ್ರಾದೇಶಿಕ ಸಮಿತಿ ಸಭೆ ಜುಲೈ 27 ರಂದು ಸೇರಿ ದೇಶದ ಮತ್ತು ರಾಜ್ಯದ ರಾಜಕೀಯ ಪರಿಸ್ಥಿತಿ ಕುರಿತು ಚರ್ಚಿಸಿತು. ಕೇಂದ್ರ ಸಮಿತಿಯ ರಾಜಕೀಯ ನಿರ್ಣಯವನ್ನೂ, ಮುಂಬರುವ ಲೋಕಸಭೆ ಚುನಾವಣೆಯ ಕುರಿತು ಪಾರ್ಟಿಯ ನಿಲುವೆಯನ್ನು ವಿವರಿಸಿ, ಸೆಪ್ಟಂಬರ್ ತಿಂಗಳಲ್ಲಿ ರಾಜ್ಯಾದ್ಯಂತ ರಾಜಕೀಯ ಚಳುವಳಿ ನಡೆಸಬೇಕೆಂಬ ರಾಜ್ಯ ಸಮಿತಿಯ ನಿರ್ಣಯವನ್ನೂ ವಿವರಿಸಿದರು. ರೂ 1000 ಎಕೆಜಿ ಭವನ ನಿಧಿಗೂ ರೂ 200 ರಾಜ್ಯ ಸಮಿತಿ ನಿಧಿಗೂ ಕೂಡಲೇ ಹಣ ಕೂಡಿಸಿ ಕೊಡಬೇಕೆಂದೂ ಒತ್ತಾಯಿಸಿದರು.

ತುಮಕೂರು

ಆಗಸ್ಟ್ 4 ರಂದು ತುಮಕೂರು ಜಿಲ್ಲಾ ಸಮಿತಿ ಸಭೆ ಸೇರಿತ್ತು. ರಾಜ್ಯ ಕಾರ್ಯದರ್ಶಿ ಟಿ. ರಾಮಚಂದ್ರರಾವ್ ಮತ್ತು ಸೆಕ್ರೆಟೇರಿಯೆಟ್ ಸದಸ್ಯರಾದ ಎಸ್. ಕೆ. ಉಪಾಧ್ಯಾಯರು ಕೇಂದ್ರ ಸಮಿತಿಯ ರಾಜಕೀಯ ನಿರ್ಣಯಗಳನ್ನು ವಿವರಿಸಿ, ಇಂದಿರಾ ಕಾಂಗ್ರೆಸ್ಸಿನ ಜನ ವಿರೋಧಿ, ಅಪಾಯಕಾರಿ ನೀತಿಯ ವಿರುದ್ಧ ಜನಜಾಗೃತಿ ಉಂಟು ಮಾಡುವ ಚಳುವಳಿ ತೀವ್ರಗೊಳಿಸುವುದರ ಅವಶ್ಯಕತೆಯನ್ನು ಒತ್ತಿ ಹೇಳಿದರು. ಅಜೀಜ್‌ಸೇಠ್, ಚಂದ್ರಪ್ರಭಾ ಅರಸ್ ಅವರ ರಾಜೀನಾಮೆಯಿಂದುಂಟಾದ ಪರಿಸ್ಥಿತಿಯನ್ನು ವಿವರಿಸಿ, ಮುಂದೆ ಬರಬಹುದಾದ ಲೋಕಸಭೆ. ಶಾಸನ ಸಭೆ ಚುನಾವಣೆಗೆ ಸಿದ್ಧತೆ ನಡೆಸಬೇಕೆಂದೂ ರೈತ-ಕಾರ್ಮಿಕರ ಚಳುವಳಿ ವಿಸ್ತರಿಸಬೇಕೆಂದೂ ಹೇಳಿದರು ಜಿಲ್ಲಾ ಕಾರ್ಯದರ್ಶಿ ಕೆ. ಆರ್. ನಾಯಕ್ ಅವರು ರಾಜಕೀಯ ಪರಿಸ್ಥಿತಿ, ಪಾರ್ಟಿ ಚಟುವಟಿಕೆಗಳ ವಿವರಣೆ ನೀಡಿದರು. ಎಕೆಜಿ ಭವನ ನಿಧಿಗೆ ರೂ 11000 ಕೂಡಿಸಲು ನಿರ್ಧರಿಸಿತು.

ಶಿವಮೊಗ್ಗ

ಶಿವಮೊಗ್ಗದ ಪ್ರಾದೇಶಿಕ ಸಮಿತಿ ಸಭೆ ಆಗಸ್ಟ್ 2 ರಂದು ಸೇರಿ, ಸೆಕ್ರೆಟೇರಿಯೆಟ್ ಸದಸ್ಯ ಸಿ. ನಂಜುಂಡಪ್ಪನವರಿಂದ ಕೇಂದ್ರ ಸಮಿತಿಯ ರಾಜಕೀಯ ವರದಿಯ ವಿವರಣೆಯನ್ನು ಕೇಳಿತು. ಸೆಪ್ಟೆಂಬರ್ ತಿಂಗಳಲ್ಲಿ ನಡೆಸಬೇಕಾಗಿರುವ ರಾಜಕೀಯ ಪ್ರಕ್ಷೋಭೆ ಕುರಿತು ಚರ್ಚೆ ಮಾಡಿತು. ಎಕೆಜಿ ಭವನ ನಿಧಿಗೆ ರೂ 5000 ಕೂಡಿಸಲು ನಿರ್ಧರಿಸಿತು. ರೈತ ಸಂಘದ ಚಳುವಳಿಗೆ ಬೆಂಬಲ ನೀಡಲು ತೀರ್ಮಾನಿಸಲಾಯಿತು. ಶಿವಮೊಗ್ಗ ಪೋಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ಉತ್ತಪ್ಪನವರು ಸಿಪಿಐ (ಎಂ) ಮುಖಂಡರಾದ ತಿರುಕಪ್ಪನವರ ವಿಷಯದಲ್ಲಿ ಹೀನಾಯವಾಗಿ ವರ್ತಿಸಿದ್ದನ್ನು ಸಭೆ ಖಂಡಿಸಿತು. ಸಾಯಂಕಾಲ ನಡೆದ ಪಾರ್ಟಿ ಸದಸ್ಯರ ಹಿತೈಷಿಗಳ ಸಭೆಯನ್ನುದ್ದೇಶಿಸಿ ಸಿ. ನಂಜುಂಡಪ್ಪ, ಕೆ. ಎಂ. ಶ್ರೀನಿವಾಸ್, ಪುಟ್ಟಸ್ವಾಮಿ ಚಂದುಕಟ್ಟೆ ಮೊದಲಾದವರು ಭಾಷಣ ಮಾಡಿದರು.

○

ಬಿಜಾಪುರ ನಗರಸಭೆಯಿಂದ ಅನ್ಯಾಯ

ಬಿಜಾಪುರ ನಗರ ಸಭೆ ಸದಸ್ಯರ ಅನೀತಿ, ಭ್ರಷ್ಟಾಚಾರ ವರ್ತನೆಯಿಂದಾಗಿ, ಬಡ ಅಂಗಡಿ ಕಾರರಿಗೂ, ಕಾರ್ಮಿಕ ಸಂಘಕ್ಕೂ ಅನ್ಯಾಯವಾಗುತ್ತಿದೆ. ಮೀನಾಕ್ಷಿ ಚೌಕದಲ್ಲಿದ್ದ ನೂರಾರು ಬಡ ಜನರ ಅಂಗಡಿಗಳನ್ನೂ ಅಲ್ಲಿಯೇ ಇದ್ದ ಮುನಿಸಿಪಲ್ ವರ್ಕರ್ಸ್ ಯೂನಿಯನ್ನಿನ ಆಫೀಸನ್ನೂ ಕಿತ್ತು ಹಾಕಿ, ಕೆಲವೇ ಜನ ಸದಸ್ಯರೂ, ಒಬ್ಬಿಬ್ಬ ನೌಕರದಾರರೂ ತಂತಮ್ಮ ಹೆಸರಲ್ಲಿ ಅಂಗಡಿಗಳನ್ನು ಹಂಚಿಕೊಂಡು ಬಡವರಿಗೆ ಅನ್ಯಾಯವೆಸಗಿದ್ದಾರೆ.

ಇದರ ವಿರುದ್ಧ ನಗರಸಭೆ ಸದಸ್ಯರಾದ ಭೀಮಸಿ ಕಲಾದಗಿಯವರೂ, ಸಿಪಿಐ [ಎಂ] ಪಕ್ಷವೂ ತಕರಾರು ಮಾಡಿದರೂ ಕೂಡ ಬಡವರಿಗೆ ನ್ಯಾಯ ಸಿಗದಂತಾಗಿದೆ. ಇಂಥ ಅನ್ಯಾಯದ ವಿರುದ್ಧ ಹೋರಾಡಲು ಸಿದ್ಧತೆ ನಡೆದಿದೆ.

ಹಳ್ಳಿಯಿಂದ ಹಳ್ಳಿಗೆ ರೈತ ಜಾತಾ

ಕರ್ನಾಟಕ ಪ್ರಾಂತ ರೈತ ಸಂಘದ ಉತ್ತರ ಕರ್ನಾಟಕ ವಿಭಾಗ ಸಮಿತಿ ಸಭೆ 30-7-84 ರಂದು ಕಾ॥ ಶಕ್ಕಪ್ಪ ಕಿರೆಣಗಿ [ರಾಜ್ಯ ಸಮಿತಿ ಖಜಾಂಚಿ] ಅವರ ಅಧ್ಯಕ್ಷತೆಯಲ್ಲಿ, ರಾಯಚೂರು ನಗರದ ರೈತ ಭವನದಲ್ಲಿ ನಡೆಯಿತು. ಇಪ್ಪತ್ತೊಂದು ಜನರು ಸಭೆಯಲ್ಲಿ ಭಾಗವಹಿಸಿದ್ದರು.

ಕಾ॥ ಚಂದ್ರಶೇಖರ ಬಾಳೆ, ರಾಜ್ಯ ಸಮಿತಿ ಕಾರ್ಯದರ್ಶಿಯವರು ರಾಜ್ಯ ಸಮಿತಿ ಸಭೆಯ ತೀರ್ಮಾನಗಳನ್ನು ವರದಿ ಮಾಡಿದರು. ಹಾಜರಿದ್ದ ಸಂಗಾತಿಗಳು, ತಾಲ್ಲೂಕ್‌ವಾರು, ಜಿಲ್ಲಾವಾರು ಕೂಲಂಕುಷ ವರದಿ ಮಾಡಿದರು.

ಉತ್ತರ ಕರ್ನಾಟಕ ವಿಭಾಗದಲ್ಲಿ ಚಟುವಟಿಕೆಗಳು ಚುರುಕಾಗಿ ನಡೆದಿದ್ದು, ಜೂನ್ ಹನ್ನೊಂದರ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಹಿನ್ನೆಲೆಯಲ್ಲಿ ರಾಜ್ಯ ಸಮಿತಿಯ ತೀರ್ಮಾನಗಳನ್ನು ಜಾರಿಗೊಳಿಸಲು ಗ್ರಾಮಗಳಿಗೆ ಸಂಪರ್ಕಿಸಿ ಅಲ್ಲಿಯ ವಿದ್ಯಮಾನಗಳನ್ನು ಅಭ್ಯಸಿಸಿ, ಗ್ರಾಮ ಸಭೆಗಳನ್ನು ನಡೆಸಿ, ಗ್ರಾಮ ಸಮಿತಿಗಳನ್ನು ರಚಿಸಲು ಸಹಕಾರಿಯಾಗುವಂತೆ ಕಾರ್ಯಕ್ರಮ ರೂಪಿಸಲು ಚರ್ಚೆ ನಡೆಯಿತು.

ಗ್ರಾಮಗಳ ಸಮಗ್ರ ದರ್ಶನ ಯೋಜನೆಯೆಂಬ ಪ್ರಶ್ನಾವಳಿಯನ್ನು ತೆಗೆದುಕೊಂಡು, ನಿಗದಿಯಾದ ಹೋಬಳಿ, ಪ್ರದೇಶವನ್ನು ಗುರುತಿಸಿ, ಕಾರ್ಯಕರ್ತರು ಗ್ರಾಮದಿಂದ, ಗ್ರಾಮಕ್ಕೆ, ಕಾಲ್ನಡೆ ಜಾತಾ ನಡೆಸಲು ತೀರ್ಮಾನಿಸಲಾಯಿತು. ಆಗಸ್ಟ್ ತಿಂಗಳಲ್ಲಿ 10 ರಿಂದ 15 ದಿವಸಗಳವರೆಗೆ ತಾಲೂಕುವಾರು ರೈತ ಸಂಘದ ಕಾರ್ಯಕರ್ತರುಗಳನ್ನು ಗ್ರಾಮಗಳಿಗೆ ಕಳಿಸಿ ಜಾತಾವನ್ನು ಎಲ್ಲಾ ತಾಲೂಕುಗಳಲ್ಲಿ ಯಶಸ್ವಿಯಾಗಿ ನಡೆಸಲು ತೀರ್ಮಾನಿಸಲಾಗಿದೆ.

ಪುತ್ತೂರು ತಾಲೂಕು ರೈತ ಸಂಘದ ಸಭೆ

ಆಗಸ್ಟ್ 5 ರಂದು ಪುತ್ತೂರು ತಾಲೂಕು ರೈತ ಸಂಘದ ಸಭೆಯು ಕಾ। ಟಿ. ಸಿ. ಮಾರ್ಕೋಸ್ ಅವರ ಅಧ್ಯಕ್ಷತೆಯಲ್ಲಿ ಸೇರಿತು. ಆರಂಭದಲ್ಲಿ ಪಕ್ಷದ ತಾಲೂಕು ಸಮಿತಿಯ ಕಾರ್ಯದರ್ಶಿ ಬಿ. ರಾಮಕೃಷ್ಣರವರು ಸ್ವಾಗತಿಸಿದರು. ಮುಖ್ಯ ಅತಿಥಿಗಳಾಗಿ ಕಾ॥ ಎಂ. ಕೆ. ಭಟ್ ಉಪಸ್ಥಿತರಿದ್ದರು. ಅವರು ರೈತ ಸಂಘದ ಉದ್ದೇಶ, ಕಾರ್ಯಕ್ರಮಗಳನ್ನು ವಿವರಿಸಿದರು. ರೈತ ಸಂಘವು ಬಡ ದರಖಾಸ್ತುದಾರರನ್ನು ಸಂಘಟಿಸಿ ಒಡೆಯರು ಆಗುವಂತೆ ಮಾಡಿರುವ ಭೂಮಿಯನ್ನು ಸಕ್ರಮಗೊಳಿಸುವಂತೆ ರೈತ ಸಂಘವು ಹೋರಾಟ ನಡೆಸಿ ಗಳಿಸಿದ ಯಶಸ್ವಿಯನ್ನು ವಿವರಿಸಿದರು. ಹಾಗೂ ಈ ಹೋರಾಟದ ಸಲುವಾಗಿ ಸರಕಾರ ತೆಗೆದುಕೊಂಡ ತೀರ್ಮಾನವನ್ನು ತಿಳಿಸಿದರು. ಸರಕಾರ ಇನ್ನೆರಡು ತಿಂಗಳುಗಳಲ್ಲಿ ಬಡವರು ಆಕ್ರಮಿಸಿ ಅಗಮೇ ಮಾಡಿದ ಭೂಮಿಯನ್ನು ಸಕ್ರಮಗೊಳಿಸಿ ಬಡವರಿಗೆ ಹಕ್ಕುಪತ್ರ ನೀಡದಿದ್ದಲ್ಲಿ ಮುಂದಿನ ಹೋರಾಟಕ್ಕೆ ಬಡ ಅಗಮೆದಾರರು ಸನ್ನದ್ಧರಾಗಬೇಕೆಂದು ಕರೆಯಿತ್ತರು.

ನಿರ್ಣಯಗಳು

1. ಸರಕಾರವು ಇನ್ನೆರಡು ತಿಂಗಳುಗಳಲ್ಲಿ ಅಗಮೆದಾರರ ಭೂಮಿಯನ್ನು ಸಕ್ರಮಗೊಳಿಸಿ ಅವರ ಹೆಸರಿಗೆ ಹಕ್ಕುಪತ್ರ ನೀಡದಿದ್ದಲ್ಲಿ ಜಿಲ್ಲಾ, ರಾಜ್ಯ ಮಟ್ಟದ ಹೋರಾಟಕ್ಕೆ ಬೆಂಬಲವನ್ನಿತ್ತು ಹೋರಾಟವನ್ನು ಯಶಸ್ವಿಗೊಳಿಸುವುದು.

2. ಆರಕ್ಷಕ ಇಲಾಖೆಯ ಪಕ್ಷಪಾತ ಧೋರಣೆ ಹಾಗೂ ದೌರ್ಜನ್ಯವನ್ನು ಖಂಡಿಸಿ ತಾ॥ 17-8-84 ರಂದು ಪುತ್ತೂರಿನ ವಲಯ ನಿರೀಕ್ಷಕರ ಕಛೇರಿಯ ಎದುರು ನಡೆಯುವ ಹೋರಾಟವನ್ನು ಯಶಸ್ವಿಗೊಳಿಸುವುದು.

3. ಪುತ್ತೂರು ತಾಲೂಕಿನ 68 ಗ್ರಾಮಗಳಲ್ಲಿ ರೈತ ಸಂಘವನ್ನು ಕಟ್ಟುವ ಮತ್ತು ಬಲಪಡಿಸುವ ದೃಷ್ಟಿಯಿಂದ 7 ಕಡೆಗಳಲ್ಲಿ ಪ್ರಾದೇಶಿಕವಾಗಿ ರೈತ ಸಂಘದ ಕಾರ್ಯಕರ್ತರ ಶಿಬಿರ ಮತ್ತು ತರಬೇತಿ ನಡೆಸುವುದು.

★

ಕನಸಾಗಿ ಉಳಿದ ಜನತೆಯ ನಿರೀಕ್ಷೆಗಳು

[1ನೇ ಪುಟದಿಂದ]

ಳನ್ನೆದುರಿಸಿ ದೇಶದ ಐಕ್ಯತೆಗೆ ಹೋರಾಡಲು ಪ್ರತಿಜ್ಞೆ ಮಾಡೋಣ. ಕೋಮುವಾದಿ ಶಕ್ತಿಗಳೂ ಈಗ ಬೆಳೆಯುತ್ತಿರುವುದು ವಿಷಾದಕರ. ಇದನ್ನು ಎದುರಿಸಬೇಕು.

ಸ್ವಾತಂತ್ರ್ಯ ಬಂದ ನಂತರ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ವಿಕಾಸಗೊಳ್ಳುವ ಬದಲು ಸರಕಾರದ ಸಂಕುಚಿತ ಧೋರಣೆಗಳ ಪರಿಣಾಮವಾಗಿ ನಾಗರಿಕ ಹಕ್ಕುಗಳು ಮೊಟಕುಗೊಳಿಸಲ್ಪಡುತ್ತಿವೆ. ಸ್ಥಾನಬದ್ಧತಾ ಕಾನೂನು, ಮುಂತಾದ ಕಾನೂನುಗಳು ಜನತೆಯ ಹಕ್ಕುಗಳನ್ನು ಮೊಟಕುಗೊಳಿಸುತ್ತಿರುವುದಲ್ಲದೆ, ಹಲವಾರು ಪ್ರತಿಬಂಧಕಾಜ್ಞೆಗಳು ಉಪಯೋಗಿಸಲ್ಪಡುತ್ತಿವೆ. ನ್ಯಾಯವಾದ ಬೇಡಿಕೆಗಳಿಗೆ ಹೋರಾಡುತ್ತಿರುವ ಜನತೆಯ ಮೇಲೆ ದಬ್ಬಾಳಿಕೆ, ಗೋಳಿಬಾರುಗಳು ನಡೆಯುತ್ತಿವೆ. ಇದನ್ನೆದುರಿಸುವುದು ಜನತೆಯ ಕರ್ತವ್ಯವಾಗಿದೆ.

ಯುದ್ಧದ ಕಾರ್ಮೋಡಗಳು ಜಗತ್ತಿನಾದ್ಯಂತ ಆವರಿಸಿದ್ದು ಅಮೇರಿಕನ್ ಸಾಮ್ರಾಜ್ಯಶಾಹಿಗಳು ಎಲ್ಲ ವಿಧದ ಅಣ್ವಸ್ತ್ರಗಳು ಯೂರೋಪು ಮತ್ತಿತರ ಭಾಗಗಳಲ್ಲೂ ರವಾನಿಸಿ ಮಾನವ ಜನಾಂಗಕ್ಕೆ ಅಪಾಯ ತಂದಿವೆ. ನಮ್ಮ ನೆರೆ ರಾಷ್ಟ್ರಗಳಿಗೂ ಈ ಆಯುಧಗಳನ್ನೊದಗಿಸಿ ನಮ್ಮ ದೇಶಕ್ಕೂ ಯುದ್ಧದ ಅಪಾಯ ಒದಗಿದೆ. ಸಾಮ್ರಾಜ್ಯಶಾಹಿಗಳ ಯುದ್ಧ ಪಿತೂರಿಗಳನ್ನು ಸೋಲಿಸಿ, ಇತರ ದೇಶಗಳ ಜನತೆ ನಡೆಸುವ ಶಾಂತಿ ಚಳುವಳಿಯಲ್ಲಿ ಭಾರತದ ಜನತೆಯೂ ಭಾಗವಹಿಸಿ ಯುದ್ಧವನ್ನೆದುರಿಸುವ ಹೋರಾಟವನ್ನು ಬಲಗೊಳಿಸೋಣ.

ಆರಂಭದಲ್ಲಿದ್ದ ಕಾಂಗ್ರೆಸ್ ಪಕ್ಷದ ಗುತ್ತೆದಾರಿ ಸ್ವಾಮ್ಯತೆಯನ್ನು ಕಮ್ಯೂನಿಸ್ಟ್ ಪಾರ್ಟಿ 1957 ರಲ್ಲಿ ಕೇರಳದಲ್ಲಿ ಕೊನೆಗೊಳಿಸಿತು. ಆದರೆ ಕಾಂಗ್ರೆಸ್ 1959 ರಲ್ಲಿ ಆ ಸರಕಾರವನ್ನುರುಳಿಸಿತು. 1967 ರಲ್ಲಿ 10 ರಾಜ್ಯಗಳಲ್ಲಿ ಕಾಂಗ್ರೆಸ್ ಸೋತು ಎರಡು ರಾಜ್ಯಗಳಲ್ಲಿ-ಕೇರಳ ಮತ್ತು ಬಂಗಾಳ-ಕಮ್ಯೂನಿಸ್ಟ್ (ಮಾರ್ಕ್ಸಿಸ್ಟ್) ಪಾರ್ಟಿಯ ನೇತೃತ್ವದ ಸರಕಾರಗಳು ಬಂದುವು. ಆದರೂ ಅವುಗಳನ್ನು ಆಡಳಿತ ನಡೆಸಲು ಹೆಚ್ಚು ಕಾಲ ಕಾಂಗ್ರೆಸ್ ಬಿಡಲಿಲ್ಲ. ಆದರೆ 1977 ರಿಂದ ಬಂಗಾಳದಲ್ಲೂ, ತ್ರಿಪುರಾದಲ್ಲೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದ ಎಡ ಪಕ್ಷಗಳ ಸರಕಾರಗಳಿವೆ. 1983 ರಲ್ಲಿ ಆಂಧ್ರ ಮತ್ತು ಕರ್ನಾಟಕದಲ್ಲೂ ಕಾಂಗ್ರೆಸ್ಸೇತರ ಸರಕಾರಗಳು ಬಂದಿವೆ

ಜಮ್ಮು ಮತ್ತು ಕಾಶ್ಮೀರದಲ್ಲಿ 1983 ರಲ್ಲಿ ಆರಿಸಲ್ಪಟ್ಟ ಕಾಂಗ್ರೆಸ್ಸೇತರ ಸರಕಾರವನ್ನು ಈಗ ಕಾಂಗ್ರೆಸ್ಸು ಉರುಳಿಸಿದೆ. ಇತರ ಸರಕಾರಗಳನ್ನು ಉರುಳಿಸಲು ಸತತ ಪ್ರಯತ್ನ ನಡೆಯುತ್ತಿರುವುದನ್ನು ನೋಡಬಹುದು. ಇದನ್ನೆದುರಿಸಿ ಹೋರಾಡೋಣ.

ನಮ್ಮ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದ ಎರಡು ಸರಕಾರಗಳು ಕಾಂಗ್ರೆಸ್ ಧೋರಣೆಗಳಿಗೆ ಪ್ರತಿಯಾಗಿ ಅನುಸರಿಸುತ್ತಿರುವ ಧೋರಣೆಗಳು ಜನಪ್ರಿಯವಾಗಿರುವುದಲ್ಲದೆ ಇತರರಿಗೆ ಮಾರ್ಗದರ್ಶಿಯಾಗಿದೆ. ರಾಜ್ಯಗಳ ಸ್ವಾಯತ್ತತೆಗೆ ಹೋರಾಡುವಾಗ ಈ ಸರಕಾರಗಳ ಧೋರಣೆಗಳನ್ನು ಪ್ರಚುರಪಡಿಸೋಣ.

ಸ್ವಾತಂತ್ರ್ಯಕ್ಕೋಸ್ಕರ ಹೋರಾಡಿದ ಜನತೆ, ಸ್ವಾತಂತ್ರ್ಯ ಬಂದ ನಂತರವೂ ಹೋರಾಟವನ್ನು ಮುಂದುವರಿಸಿಕೊಂಡು ಬಂದಿವೆ. ರೈತರೂ, ಕಾರ್ಮಿಕರೂ, ವಿದ್ಯಾರ್ಥಿಗಳೂ ಹೋರಾಡುತ್ತಿದ್ದಾರೆ. ಇತರ ದುಡಿಯುವ ವಿಭಾಗದಲ್ಲೂ ಅತೃಪ್ತಿಯು ಬೆಳೆಯುತ್ತಿದೆ. ಬೆಲೆ ಏರಿಕೆ, ನಿರುದ್ಯೋಗ, ಲಂಚಗುಳಿತನಗಳಿಂದ ಜನ ಬೇಸತ್ತು ಹೊಸ ಸಮಾಜ ನಿರ್ಮಾಣಕ್ಕೆ ಹೋರಾಡಲು ಸಂಘಟಿತರಾಗುತ್ತಿದ್ದಾರೆ. ಸಮಾಜವಾದಿ ಜಗತ್ತು ದಿನೇ ದಿನೇ ಬಲಗೊಳ್ಳುತ್ತಿದ್ದು ಅದರಿಂದ ನಮ್ಮ ದೇಶದ ಜನತೆಯೂ ಸ್ಫೂರ್ತಿಗೊಂಡಿದೆ

ಈ ದಿನ ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದ ಸಹಸ್ರಾರು ವೀರ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನರ್ಪಿಸೋಣ. ಈ ಹೋರಾಟದಲ್ಲಿ ಕಮ್ಯೂನಿಸ್ಟ್ ಪಾರ್ಟಿ ನಿರ್ಣಾಯಕ ಪಾತ್ರ ವಹಿಸಿದ್ದಲ್ಲದೆ ಅಪಾರ ತ್ಯಾಗ ಬಲಿದಾನ ಮಾಡಿದೆ. ಈ ಹೋರಾಟವನ್ನು ಮುಂದುವರಿಸಿ, ಸ್ವಾತಂತ್ರ್ಯ ಟಾಟಾ-ಬಿರ್ಲಾರವರಿಗೆ ಅಲ್ಲ, ಸಾಮಾನ್ಯ ಜನರಿಗೆ ಸ್ವಾತಂತ್ರ್ಯ ಸಿಗಬೇಕೆಂಬ ಉದ್ದೇಶದಿಂದ ಜನತೆಯ ಹೋರಾಟಗಳನ್ನು ನಡೆಸಿ ಮುಂದುವರಿಯೋಣ. ಕಾಂಗ್ರೆಸ್ ಸರ್ವಾಧಿಕಾರವನ್ನು ಸೋಲಿಸಿ ಈಗಿನ ಸಮಾಜ ವ್ಯವಸ್ಥೆಯ ಬದಲಾಗಿ ಕಾರ್ಮಿಕ ವರ್ಗದ ನೇತೃತ್ವದ ಜನತಾ ಪ್ರಜಾಪ್ರಭುತ್ವ ರಂಗವನ್ನು ರಚಿಸಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಮೂಲಕ ಜನತಾ ಪ್ರಜಾಪ್ರಭುತ್ವ ಸರಕಾರದ ಸ್ಥಾಪನೆಗೆ ದುಡಿದು ಅದರ ಮೂಲಕ ಸಮಾಜವಾದಿ ಕ್ರಾಂತಿ, ಸಮಾಜವಾದಿ ಸಮಾಜದ ಸ್ಥಾಪನೆಗೆ ಮುಂದುವರಿಯೋಣ.

★

ಎಸ್.ಎಫ್.ಐ. ಗೆ ಜಯ

ಕುಂದಾಪುರದ ಸರ್ಕಾರಿ ಕಿರಿಯ ಕಾಲೇಜು ವಿದ್ಯಾರ್ಥಿ ಸಂಘಕ್ಕೆ ತಾ. 4-8-84 ರಂದು ನಡೆದ ಚುನಾವಣೆಯಲ್ಲಿ ಭಾರತ ವಿದ್ಯಾರ್ಥಿ ಫೆಡರೇಷನ್ [ಎಸ್. ಎಫ್. ಐ] ಅಭ್ಯರ್ಥಿಗಳಾದ ಕೆ. ನಾಗರಾಜ್ ಅಧ್ಯಕ್ಷರಾಗಿ ಮತ್ತು ವಿ. ರಾಜು ಉಪಾಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಕಳೆದ ವರ್ಷದ ಚುನಾವಣೆಯಲ್ಲೂ ಎಸ್. ಎಫ್. ಐ. ಅಭ್ಯರ್ಥಿಯೇ ಅಧ್ಯಕ್ಷರಾಗಿ ಆಯ್ಕೆಯಾದುದನ್ನು ಇಲ್ಲಿ ಸ್ಮರಿಸಬಹುದು.

ಚುನಾವಣೆಯಲ್ಲಿ ಮತ ನೀಡಿದ ಎಲ್ಲಾ ವಿದ್ಯಾರ್ಥಿಗಳಿಗೂ ಎಸ್.ಎಫ್.ಐ., ದ. ಕ. ಜಿಲ್ಲಾ ಸಮಿತಿ ಅಧ್ಯಕ್ಷ ಕೆ. ವಿಶ್ವನಾಥ್ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ರೈತ ಕಾರ್ಯಕರ್ತರಿಗೆ ತರಬೇತಿ ಶಿಬಿರ

ಕರ್ನಾಟಕ ಪ್ರಾಂತ ರೈತ ಸಂಘದ ಮೈಸೂರು ಮತ್ತು ಕೊಡಗು ಜಿಲ್ಲೆಯ ಸಂಘಟನಾ ಕಾರ್ಯಕರ್ತರು ರೈತ ಸಂಘವನ್ನು ಕಟ್ಟಿ ಬೆಳೆಸಲು ಅನುಕೂಲವಾಗುವಂತೆ ಕಾರ್ಯಕರ್ತರನ್ನು ತರಬೇತಿ ಮಾಡುವ ಉದ್ದೇಶದಿಂದ ಈ ಎರಡೂ ಜಿಲ್ಲೆಗಳ ಕಾರ್ಯಕರ್ತರನ್ನು ಸೇರಿಸಿ ಹೆಗ್ಗಡದೇವನ ಕೋಟೆಯ ಕೊಟ್ಟಿಗೆ ಎಡಕೆರೆ ಗ್ರಾಮದಲ್ಲಿ ಸುಮಾರು 36 ಜನರಿಗೆ ಆಗಸ್ಟ್ 6 ಮತ್ತು 7 ರಂದು ಶಿಬಿರವನ್ನು ನಡೆಸಲಾಯಿತು.

ಈ ಶಿಬಿರಕ್ಕೆ ರಾಜ್ಯ ಸಮಿತಿಯಿಂದ ಕಾಮ್ರೇಡ್ ಗಳಾದ ಪಿ. ಜಗನ್ನಾಥ್ ಮತ್ತು ಎಂ. ಎನ್. ಉಗ್ರಪ್ಪನವರು ಹಾಜರಿದ್ದು ರೈತ ಸಂಘವು ನಿರ್ವಹಿಸಬೇಕಾದ ಕರ್ತವ್ಯಗಳನ್ನು ಹೇಳಿದರು. ಶಿಬಿರದ ಅಧ್ಯಕ್ಷತೆಯನ್ನು ಹೆಗ್ಗಡದೇವನ ಕೋಟೆ ತಾಲೂಕು ಸಮಿತಿಯ ಅಧ್ಯಕ್ಷರಾದ ಕಾ. ಪರಂದಾಮನ್‌ರವರು ವಹಿಸಿದ್ದರು. ಮುಖ್ಯ ಕಾರ್ಯಕರ್ತರಾದ ಕಾ. ನಂಜಪ್ಪಗೌಡರು ಶಿಬಿರದ ವಿದ್ಯಾರ್ಥಿಗಳಿಗೆ ಊಟ ವಸತಿ ಸೌಕರ್ಯಗಳನ್ನು ಏರ್ಪಡಿಸಿದ್ದರು.

Printed & Published by p. Ramachandra Rao by him on behalf of the Communist party of India (Marxist) Karnataka State Committee, K. V. Temple Street, Sultanpet, Bangalore-560053 Editoral and managerial office, L-56, K V. Temple Street. Sultanpet B 53 Phone : 24514
Editor : P. Ramachandra Rao
Managing Editor : N. K. Upadhyaya